ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ಪ್ರತಿ ದಿನವೂ ನಿಮ್ಮ ಪಾಲಿಗೆ ಒಂದು ಒಳ್ಳೆಯ ಅವಕಾಶವಾಗಲಿ. ಉತ್ತಮ ವ್ಯಕ್ತಿಯಾಗಲು, ತಪ್ಪುಗಳನ್ನು ತಿದ್ದಿಕೊಳ್ಳಲು, ನಿನ್ನೆಯ ಸಾಧನೆಯನ್ನು ಮತ್ತಷ್ಟು ಉತ್ತಮಪಡಿಸಿಕೊಳ್ಳಲು, ಇನ್ನಷ್ಟು ಪರೋಪಕಾರಿಯಾಗಲು, ಸಮಾಜಮುಖಿಯಾಗಲು ಅವಕಾಶವಾಗಲಿ. ಅದನ್ನು ನೀವು ಸಮರ್ಥವಾಗಿ ಬಳಸಿಕೊಳ್ಳುವಂತಾಗಲಿ.

ವಕ್ರತುಂಡೋಕ್ತಿ

ಕೆಲವು ಹೆಂಗಸರನ್ನು ಅವರ ಡ್ರೆಸ್ಸಿನಿಂದ ಅಳೆಯಬಾರದು. ಕಾರಣ ಅವರು ಅದನ್ನು ಅತಿ ಕಡಿಮೆ ಬಳಸಿರುತ್ತಾರೆ.

ಸ್ವತಂತ್ರ ಭಾರತದ 51ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಸಂಜೀವ್ ಖನ್ನಾ(64) ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು. ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಮಾಣ ವಚನ ಬೋಧಿಸಿದರು.

ಪುಟ ತೆರೆದಂತೆ...

ಪ್ರತಿಷ್ಠೆಯೇ ಈ ಉಪಸಮರದ ಮೂಲ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ

ನಮಗೆ ಬೇಕಾದ್ದನ್ನು ಪಡೆವ ದಾರಿಯಿದು!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಮ

ಮಾತಂದ್ರೆ ಮಾತು

ನೀವು ನನ್ನನ್ನು ತುಂಬಾ ಪ್ರೀತಿಸುತ್ತೀರಿ. ಆದರೆ ನನ್ನ ನ್ಯೂನತೆಗಳ ಬಗ್ಗೆ ನನಗೆ ಅರಿವಿದೆ. ಯಾವುದೇ ಕಲಾವಿದ ತನ್ನ ಕಲೆಗಿಂತ ದೊಡ್ಡವನಾಗಬಾರದು. ನಾನು ಇನ್ನೂ ಕಲಿಯಲು ಬಯಸುತ್ತೇನೆ. ಕಲೆಯೊಂದಿಗೆ ಸಂಪರ್ಕದಲ್ಲಿರಲು ನಾನು ಬಯಸುತ್ತೇನೆ. ದಯವಿಟ್ಟು ಇನ್ನು ಮುಂದೆ ನನ್ನನ್ನು ಉಳಗನಾಯಗನ್ (ವಿಶ್ವನಾಯಕ) ಎಂದು ಕರೆಯಬೇಡಿ. ನಿಮ್ಮ ಪ್ರೀತಿಗೆ ನಾನು ಸದಾ ಚಿರಋಣಿ.

-ಕಮಲ್ ಹಾಸನ್
ಹಿರಿಯ ನಟ

ಮೂರು ಕ್ಷೇತ್ರಗಳಲ್ಲಿ ನಾಳೆ ಮತದಾನ | ತಾರಕಕ್ಕೇರಿದ ಆರೋಪ-ಪ್ರತ್ಯಾರೋಪ

ಬಹಿರಂಗ ಪ್ರಚಾರಕ್ಕೆ ತೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮೂರೂ ಪಕ್ಷಗಳಿಗೆ ಪ್ರತಿಷ್ಠೆಯ ಕಣವಾಗಿದ್ದ ಉಪಸಮರದ ಬಹಿರಂಗ ಪ್ರಚಾರಕ್ಕೆ ತೆರೆಬಿದ್ದಿದ್ದು, ಮನೆ ಮನೆ ಪ್ರಚಾರ ಹಾಗೂ ಕತ್ತಲ ರಾತ್ರಿಯ ಚಮತ್ಕಾರದ ಲೆಕ್ಕಾಚಾರಗಳು ಶುರುವಾಗಿವೆ.

ಕೊನೆ ದಿನದ ಹೈಲೈಟ್ಸ್

- ಚನ್ನಪಟ್ಟಣ ಕ್ಷೇತ್ರದಲ್ಲಿ ಮೂರೂ ಪಕ್ಷಗಳ ಪ್ರಮುಖರ ಸಮಾಗಮ
- ದೇವೇಗೌಡರ ವಿರುದ್ಧ ಏಕವಚನದಲ್ಲೇ ಸಿದ್ದು ವಾಗ್ದಾಳಿ
- ಚನ್ನಪಟ್ಟಣದಲ್ಲಿಯೇ 3 ಪಕ್ಷಗಳ ಶಕ್ತಿ ಪ್ರದರ್ಶನ
- ಸಂಜೆ 4ರ ಬಳಿಕ ಮೂರು ಕ್ಷೇತ್ರವನ್ನು ಖಾಲಿ ಮಾಡಿದ ನಾಯಕರು
- ಡಿಕೆಶಿ, ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ ಮಾಜಿ ಪ್ರಧಾನಿ ದೇವೇಗೌಡ

ಕಾಂಗ್ರೆಸ್ ಮತ್ತು ಮೈತ್ರಿ ಪಕ್ಷಗಳ ನಾಯಕರು ಚನ್ನಪಟ್ಟಣ, ಶಿಗ್ಗಾವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಲ್ಲಿ ಅಬ್ಬರದ ಪ್ರಚಾರ ನಡೆಸಿ ಕೊನೆ ಗಳಿಗೆಯ ಮತ ಭೇಟೆ ನಡೆಸಿದರು. ಬುಧವಾರ ಮೂರು ಕ್ಷೇತ್ರಗಳಿಗೆ ಮತದಾನ ನಡೆಯಲಿದ್ದು, ನ.23ರಂದು ಫಲಿತಾಂಶ ಪ್ರಕಟವಾಗಲಿದೆ.

ನಿಖಿಲ್ ಕುಮಾರಸ್ವಾಮಿ ಪತ್ನಿ ರೇವತಿ ನಿಖಿಲ್ ಕುಮಾರ ಸ್ವಾಮಿ ಅವರು ಸೋಮವಾರ ಬೆಳಗ್ಗೆ ಚನ್ನಪಟ್ಟಣದ ವಿವಿಧೆಡೆ ಮತ ಯಾಚಿಸಿ, ವಿದ್ಯಾರ್ಥಿಗಳ ಜತೆ ಸೆಲ್ಫಿ ಕ್ಲಿಕ್ಕಿಸಿಕೊಂಡರು.

ಮಂಗಳವಾರ ಮನೆ ಮನೆಗೆ ತೆರಳಿ ಅಭ್ಯರ್ಥಿಗಳು ಪ್ರಚಾರ ನಡೆಸಲು ಮಾತ್ರ ಅವಕಾಶವಿದೆ. ಚನ್ನಪಟ್ಟಣದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಸ್ಪರ್ಧಿಸಿದ್ದು, ಕಾಂಗ್ರೆಸ್‌ನಿಂದ ಸಿ.ಪಿ.ಯೋಗೇಶ್ವರ ಅಖಾಡಕ್ಕಿಳಿದ್ದಿದ್ದಾರೆ. ಈ ಕ್ಷೇತ್ರದ ಚುನಾವಣೆ ಕಾಂಗ್ರೆಸ್ ಮತ್ತು ಎನ್‌ಡಿಎ ಮೈತ್ರಿಕೂಟಕ್ಕೆ ಸವಾಲಾಗಿ ಪರಿಣಮಿಸಿದ್ದು, ಕ್ಷೇತ್ರದಲ್ಲಿ ಪ್ರಚಾರ ಹಾಗೂ ರಾಜಕೀಯ ಪಕ್ಷಗಳ ನಡುವೆ ಆರೋಪ ಪ್ರತ್ಯಾರೋಪಗಳು ತಾರಕಕ್ಕೇರಿವೆ.

ಈ ಬಾರಿಯ ಶಿಗ್ಗಾವಿ ಕ್ಷೇತ್ರದಲ್ಲೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಪೈಪೋಟಿ ಕಂಡು ಬಂದಿವೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುತ್ರ ಭರತ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನಿಂದ ಯಾಸಿರ್ ಅಹ್ಮದ್ ಪಠಾಣ ಸ್ಪರ್ಧಿಸಿದ್ದು, ಇಬ್ಬರ ನಡುವೆ ತೀವ್ರ ಪೈಪೋಟಿ ನಡೆದಿದೆ. ಮತ್ತೊಂದೆಡೆ ಸಂಡೂರಿನಲ್ಲಿ ಸಂಸದ ತುಕಾರಾಂ ಪತ್ನಿ ಅನ್ನಪೂರ್ಣ ಕಣಕ್ಕಿಳಿದ್ದಿದ್ದರೆ ಬಿಜೆಪಿಯಿಂದ ಬಂಗಾರು ಹನುಮಂತು ಸ್ಪರ್ಧಿಸಿದ್ದಾರೆ. ಈ ಕ್ಷೇತ್ರದಲ್ಲಿ ರಾಜಕೀಯ ನಾಯಕರು ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದ್ದಾರೆ.

ಕೊನೆಯ ದಿನವೂ ಚನ್ನಪಟ್ಟಣವನ್ನೇ ಕೇಂದ್ರೀಕರಿಸಿ ಮೂರು ಪಕ್ಷದ ನಾಯಕರು ಪ್ರಚಾರ ನಡೆಸಿದ್ದು, ನಿಖಿಲ್ ಕುಮಾರಸ್ವಾಮಿ ಪರವಾಗಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಚಾರ ನಡೆಸಿದರೆ, ಸಿ.ಪಿ.ಯೋಗೇಶ್ವರ ಪರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಕೈ ನಾಯಕರು ಅಂತಿಮ ಕ್ಷಣದ ಒಲೈಕೆ ನಡೆಸಿದರು.

ನಾಯಕರ ಮಾತಿನೇಟು

- ದೇವೇಗೌಡರು, ಕುಮಾರಸ್ವಾಮಿ ಅವರು ಒಬ್ಬನೇ ಒಬ್ಬ ಒಕ್ಕಲಿಗರನ್ನೂ ಬೆಳೆಯಲು ಬಿಡಲ್ಲ: ಸಿದ್ದರಾಮಯ್ಯ
- ಸಿದ್ದರಾಮಯ್ಯ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದೇ ಈ ದೇವೇಗೌಡ: ಎಚ್.ಡಿ.ದೇವೇಗೌಡ
- ಕಾಂಗ್ರೆಸ್‌ಹಣ ಹಂಚಿಕೆ ಮಾಡುತ್ತಿದೆ: ಬೊಮ್ಮಾಯಿ

ದೇವೇಗೌಡರು ಮತ್ತು ಕುಮಾರ ಸ್ವಾಮಿ ಅವರು ಒಬ್ಬನೇ ಒಬ್ಬ ಒಕ್ಕಲಿಗರನ್ನೂ ಬೆಳೆಯಲು ಬಿಡಲ್ಲ. ಬುದ್ಧಿವಂತ ಒಕ್ಕಲಿಗರು, ರಾಜಕೀಯ ಪ್ರಜ್ಞೆಯಿರುವ ಒಕ್ಕಲಿಗರನ್ನು ದೇವೇಗೌಡರು ಮುಗಿಸುತ್ತಾರೆ. ಈಗ ಡಿಕೆ ಸಹೋದರರನ್ನು ಮುಗಿಸುವ ಪ್ರಯತ್ನ ಮಾಡ್ತಿದ್ದಾರೆ. ಸಿದ್ದರಾಮಯ್ಯ ಅವರು ಎರಡನೇ ಬಾರಿ ಮುಖ್ಯಮಂತ್ರಿ ಆದ ಅಂತ ದೇವೇಗೌಡರಿಗೆ ಹೊಟ್ಟೆಯುರಿ. ಅದಕ್ಕೇ ನಮ್ಮ ಸರಕಾರ ಕಿತ್ತಾಕುತ್ತೇವೆ ಎನ್ನುತ್ತಿದ್ದಾರೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

ಸಿದ್ದರಾಮಯ್ಯ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡಿದ್ದೇ ಈ ದೇವೇಗೌಡ. ಮತ್ತೆ ಅವರೇನು ಎಂದು ಹೇಳಲು ನಾನು ಹೋಗಲ್ಲ. ನಿಖಿಲ್ ನನ್ನ ಮೊಮ್ಮಗ ಎನ್ನುವ ಮಾತು ಬೇಕಿಲ್ಲ. ನಾಮಪತ್ರ ಸಲ್ಲಿಸುವವರೆಗೂ ನಿಖಿಲ್ ಹೆಸರನ್ನು ನಾನು ಉಲ್ಲೇಖಿಸಲೇ ಇಲ್ಲ. ಮಹಾನುಭಾವ ಎನ್ನುವ ಡಿಕೆಶಿಯ ಸೊಕ್ಕು ಮುರಿಯಲು ನಿಖಿಲ್ ಗೆಲುವು ಅನಿವಾರ್ಯ. ಪುಣ್ಯಾತ್ಮರಾದ ಮತದಾರರ ನಿರ್ಣಯವೇ ಎಲ್ಲದಕ್ಕೂ ಉತ್ತರ.

- ಎಚ್.ಡಿ.ದೇವೇಗೌಡ ಮಾಜಿ ಪ್ರಧಾನಿ

ಈ ಸರಕಾರಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೊ ಇಲ್ಲವೋ ಗೊತ್ತಿಲ್ಲ. ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ, ಸ್ವೇಚ್ಛಾಚಾರದಿಂದ ಎಲ್ಲ ಮಂತ್ರಿಗಳು ಅವರ ಜಾತಿ ಆಧಾರದಲ್ಲಿ ಮತ ಕೇಳುವುದಲ್ಲದೇ ಹಣ ಹಂಚಿಕೆ ಮಾಡುತ್ತಿದ್ದಾರೆ. ಸಿಎಂ ಆದಿಯಾಗಿ ಹಸಿ ಸುಳ್ಳು ಹೇಳುತ್ತಿದ್ದಾರೆ. ಸಿಎಂ ಒಂದು ದಿನವೂ ಈ ಕ್ಷೇತ್ರಕ್ಕೆ ಏನು ಮಾಡಿದ್ದೇನೆ ಎಂದು ಹೇಳಲಿಲ್ಲ . ನಾನೇನು ಮಾಡಿದ್ದೇನೆ ಎನ್ನುವುದಕ್ಕೆ ದಾಖಲೆಯಿದೆ, ಪರಿಶೀಲಿಸಿ.

- ಬಸವರಾಜ ಬೊಮ್ಮಾಯಿ ಮಾಜಿ ಮುಖ್ಯಮಂತ್ರಿ

ಕಾಲಾ ಕುಮಾರಸ್ವಾಮಿ ಹೇಳಿಕೆಗೆ ತೀವ್ರ ಆಕ್ಷೇಪ

ಜಮೀರ್ ಅಹ್ಮದ್‌ಗೆ ಮತ್ತೊಂದು ಸಂಕಷ್ಟ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು 'ಕಾಲಾ(ಕರಿಯ) ಕುಮಾರಸ್ವಾಮಿ' ಎಂದೂ ಹಾಗೂ ಇಡೀ ದೇವೇಗೌಡರ ಕುಟುಂಬವನ್ನೇ ಖರೀದಿ ಮಾಡುತ್ತೇನೆ ಎನ್ನುವ ಸಚಿವ ಜಮೀರ್ ಅಹ್ಮದ್ ಹೇಳಿಕೆ ಇದೀಗ ಭಾರಿ ವಿವಾದಕ್ಕೆ ಕಾರಣವಾಗಿದೆ. ಬಿಜೆಪಿಯ ಕೇಂದ್ರ ನಾಯ ಕರು ಜಮೀರ್ ವಿರುದ್ಧ ಜನಾಂಗೀಯ ನಿಂದನೆಯ ಆರೋಪವನ್ನು ಮಾಡುವ ಮೂಲಕ ರಾಷ್ಟ್ರಮಟ್ಟದಲ್ಲಿ ಸದ್ದಾಗುತ್ತಿದೆ.

ಜಮೀರ್ ಚುನಾವಣಾ ಪ್ರಚಾರದ ವೇಳೆ 'ಬಿಜೆಪಿಯನ್ನು ನಂಬಿದರೂ ಕಾಲಾ ಕುಮಾರಸ್ವಾಮಿಯನ್ನು ನಂಬಬಾರದು' ಎಂದು ಹೇಳಿರುವುದು ಇದೀಗ ವಿವಾದಕ್ಕೆ ಕಾರಣವಾಗಿದೆ. ಆದರೆ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಜಮೀರ್ ಅಹ್ಮದ್, ನಾನು ಮೊದಲಿನಿಂದಲೂ ಕುಮಾರಸ್ವಾಮಿ ಅವರನ್ನು ಕರಿಯಣ್ಣ ಎಂದು ಕರೆಯುತ್ತಿದ್ದು, ಅವರು ನನ್ನನ್ನು ಕುಳ್ಳ ಎನ್ನುತ್ತಾರೆ. ಮೊದಲಿನಿಂದಲೂ ಅದೇ ಶಬ್ದದಲ್ಲಿ ಕರೆಯುವುದರಿಂದ ಉರ್ದುವಿನಲ್ಲಿ ಮಾತನಾಡುವಾಗ ಸ್ವಾಭಾವಿಕವಾಗಿ ಆ ಹೇಳಿಕೆ ಬಂದಿದೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಜಮೀರ್ ತಮ್ಮ ಹೇಳಿಕೆಯನ್ನು ಸಮರ್ಥಿ ಸಿಕೊಂಡರೂ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಕೇಂದ್ರ ಸಚಿವರನ್ನು ಈ ರೀತಿ ವರ್ಣನಿಂದಕ ಹಾಗೂ ಜನಾಂಗೀಯ ನಿಂದನೆ ಮಾಡುವುದು ಸರಿಯಲ್ಲ. ಅವರ ವಿರುದ್ಧ ಕೂಡಲೇ ದೂರು ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

→ 4

ಕುಮಾರ ಸ್ವಾಮಿ ಅವರನ್ನು ಮೊದಲಿನಿಂದಲೂ 'ಕರಿಯಣ್ಣ' ಅಂತಲೇ ಕರೆಯೋದು. ಅದನ್ನು ಉರ್ದುವಿನಲ್ಲಿ ಹೇಳಿದ್ದೇನೆ. ಮುಂಚೆಯಿಂದಲೂ ಕರೆಯುವುದರಿಂದ ಸ್ವಾಭಾವಿಕವಾಗಿ ಆ ಪದ ಬಂದಿದೆ. ಇನ್ನು ದೇವೇಗೌಡರನ್ನು ಖರೀದಿಸುವ ಅಥವಾ ಒಕ್ಕಲಿಗರನ್ನು ಖರೀದಿಸುತ್ತೇನೆ ಎಂದಿಲ್ಲ. ಆದರೆ ನಮ್ಮ ಸಮಾಜವನ್ನು ಖರೀದಿ ಮಾಡಲು ಆಗಲ್ಲ ಅಂದಿದ್ದೇನೆ.

- ಜಮೀರ್ ಅಹ್ಮದ್ ಸಚಿವ

ಕೇಂದ್ರ ಸಚಿವ ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯವರನ್ನು ಕಾಂಗ್ರೆಸ್‌ನ ಜಮೀರ್ 'ಕಾಲಾ ಕುಮಾರಸ್ವಾಮಿ' ಎಂದಿರುವುದನ್ನು ಖಂಡಿಸುತ್ತೇನೆ. ಇದೊಂದು ಜನಾಂಗೀಯ ನಿಂದನೆ. ಇದೇ ರೀತಿ ದಕ್ಷಿಣ ಭಾರತೀಯರು ಆಫ್ರಿಕಾದವರ ರೀತಿ ಕಾಣುತ್ತಾರೆ, ಈಶಾನ್ಯ ಭಾರತೀಯರು ಚೀನಾದವರಂತೆ ಮತ್ತು ಉತ್ತರ ಭಾರತೀಯರು ಅರಬ್ಬಿನವರಂತೆ ಕಾಣುತ್ತಾರೆ ಎಂದು ರಾಹುಲ್ ಗಾಂಧಿ ಸಲಹೆಗಾರರು ಹೇಳಿಕೆ ನೀಡಿದ್ದರು.

- ಕಿರಣ್ ರಿಜೂಜು ಕೇಂದ್ರ ಸಚಿವ

11 ಶಂಕಿತ ಉಗ್ರರ ಹತ್ಯೆ

ಇಂಫಾಲ್: ಮಣಿಪುರದ ಜಿರಿಬಾಮ್ ಜಿಲ್ಲೆಯಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ 11 ಶಂಕಿತ ಉಗ್ರರನ್ನು ಹತ್ಯೆ ಮಾಡಲಾಗಿದೆ. ಕೇಂದ್ರ ಮೀಸಲು ಪಡೆಗಳು ಮತ್ತು ಉಗ್ರರ ನಡುವೆ ಎನ್‌ಕೌಂಟರ್ ನಡೆದಿದೆ. ಶಂಕಿತ ಉಗ್ರರು ಮೈತೇಯಿ ಸಮುದಾಯದ ಮಹಿಳೆಯೊಬ್ಬರನ್ನು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ವರ್ಷ ಮೇ 3ರಂದು ಮಣಿಪುರದಲ್ಲಿ ಕುಕಿ ಮತ್ತು ಮೈತೇಯಿ ಸಮುದಾಯಗಳ ನಡುವೆ ಸಂಘರ್ಷ ಆರಂಭವಾದಾಗಿನಿಂದಲೂ ನೂರಾರು ಮಂದಿಯನ್ನು ಹತ್ಯೆ ಮಾಡಲಾಗಿದೆ.

ಗುಂಡೇಟಿಗೆ ಯುವಕ ಬಲಿ

ಖಾನಾಪುರ: ಖಾನಾಪುರ ತಾಲೂಕಿನ ಐತಿಹಾಸಿಕ ಹಲಸಿ ಗ್ರಾಮ ವ್ಯಾಪ್ತಿಯಲ್ಲಿ ಸೋಮವಾರ ನಸುಕಿನಲ್ಲಿ ಅಪರಿಚಿತರು ಗುಂಡು ಹಾರಿಸಿದ್ದು ಯುವಕ ಮೃತಪಟ್ಟಿದ್ದಾನೆ. ಹಲಸಿ ನಿವಾಸಿ ಅಲ್ತಾಫ್ ಮಕಾನದಾರ (30) ಸಾವಿಗೀಡಾದವರು. ಕಾಡಂಚಿಗೆ ಇರುವ ರಸ್ತೆ ಪಕ್ಕದ ಮರಳು ತೆಗೆಯುವ ಸ್ಥಳದಲ್ಲಿ ಘಟನೆ ನಡೆದಿದೆ. ಗುಂಡು ನೇರವಾಗಿ ಯುವಕನ ಎದೆಭಾಗದ ಕೆಳಗೆ ಬಿದ್ದಿದ್ದರಿಂದ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಘಟನೆ ಹೇಗೆ ನಡೆಯಿತು ಎಂಬ ಬಗ್ಗೆ ಪೊಲೀಸರಿಗೆ ಸ್ಪಷ್ಟವಾಗಿ ಗೊತ್ತಾಗಿಲ್ಲ.

ಇರಾನ್ ಯೋಧರ ಬಲಿ

ಟೆಹ್ರಾನ್: ಇರಾನ್‌ನೊಂದಿಗಿನ ಪಾಕಿಸ್ತಾನದ ಗಡಿಯಲ್ಲಿ ಉಗ್ರರು ನಡೆಸಿದ ದಾಳಿಯಲ್ಲಿ ಐವರು ಇರಾನಿನ ಯೋಧರು ಸಾವನ್ನಪ್ಪಿದ್ದಾರೆ. ಮೃತರು ಅರೆಸೈನಿಕ ರೆವಲ್ಯೂಷನರಿ ಗಾರ್ಡ್‌ನ ಸ್ವಯಂಸೇವಕ ಬಸಿಜ್ ಪಡೆಯ ಬಲೂಚ್ ಜನಾಂಗೀಯ ಸದಸ್ಯರು ಎಂದು ಗುರುತಿಸಲಾಗಿದೆ. ಈ ದಾಳಿಯ ಹೊಣೆಯನ್ನು ಯಾವುದೇ ಗುಂಪು ತಕ್ಷಣವೇ ಹೊತ್ತುಕೊಂಡಿಲ್ಲ. ಕಳೆದ ತಿಂಗಳು, ಅಪರಿಚಿತ ಬಂದೂಕುಧಾರಿಗಳು ಪ್ರಾಂತ್ಯದ ರೆವಲ್ಯೂಷನರಿ ಗಾರ್ಡ್ ಮುಖ್ಯಸ್ಥ ಸೇರಿದಂತೆ ನಾಲ್ವರನ್ನು ಕೊಂದಿದ್ದರು.

ಫನ್‌ತರಂಗ

- ರಘುಪತಿ ಶೃಂಗೇರಿ -



ನ್ಯಾ.ಮೈಕಲ್ ಡಿ. ಕುನ್ಹಾ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗೆ ಕಾಂಗ್ರೆಸ್ ಖಂಡನೆ

ಜೋಶಿ ವಿರುದ್ಧ ರಾಜ್ಯಪಾಲರಿಗೆ ದೂರು

ಬೆಂಗಳೂರು: ಕೋವಿಡ್ ಅಕ್ರಮದ ಮಧ್ಯಂತರ ವರದಿ ನೀಡಿದ್ದ ನಿವೃತ್ತ ನ್ಯಾ.ಮೈಕಲ್ ಡಿ. ಕುನ್ಹಾ ಅವರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಚಿವ ದಿನೇಶ್ ಗುಂಡೂರಾವ್ ಹಾಗೂ ಕೃಷ್ಣಬೈರೇಗೌಡ ರಾಜ್ಯಪಾಲರಿಗೆ ದೂರು ಸಲ್ಲಿಸಿದ್ದಾರೆ.

ಕೋವಿಡ್ ಹಗರಣದಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಶ್ರೀರಾಮುಲು ಅವರ ಹೆಸರು ಉಲ್ಲೇಖವಾಗಿರುವುದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸುವ ವೇಳೆ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, 'ಕುನ್ಹಾ ಅವರು ಕಾಂಗ್ರೆಸ್ ಏಜೆಂಟ್ ರೀತಿ ವರದಿ ನೀಡಿದ್ದಾರೆ' ಎನ್ನುವ ಹೇಳಿಕೆ ನೀಡಿದ್ದರು. ಈ ಹೇಳಿಕೆ ತೀವ್ರ ವಿವಾದಕ್ಕೆ ಕಾರಣವಾಗಿದೆ.

ಕೇಂದ್ರ ಸಚಿವರಾಗಿ, ಜವಾಬ್ದಾರಿಯುತ ಸ್ಥಾನದಲ್ಲಿರುವವರು ನಿವೃತ್ತ ನ್ಯಾಯಮೂರ್ತಿಗಳ ಬಗ್ಗೆ ಈ ರೀತಿ ಹೇಳಿಕೆ ನೀಡುವುದು ಸರಿಯಲ್ಲ. ಇದರಿಂದ ಸಮಾಜಕ್ಕೆ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂದು ಕಾಂಗ್ರೆಸ್ ನಾಯಕರು ಆರೋಪಿಸಿದ್ದಾರೆ. ಇದೇ ವಿಷಯವಾಗಿ ಸೋಮವಾರ ರಾಜಭವನದಲ್ಲಿ ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾದ ಸಚಿವ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಅವರು ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮವಹಿಸುವಂತೆ ಮನವಿ ಮಾಡಿದರು. ನಿವೃತ್ತ ನ್ಯಾಯ ಮೂರ್ತಿಗಳ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿರುವ ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮಕ್ಕೆ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಬೇಕು ಎಂದು ಆಗ್ರಹಿಸಿದರು.

ಪ್ರಲ್ಹಾದ್ ಜೋಶಿ ನ್ಯಾಯಾಂಗ ತನಿಖಾ ಆಯೋಗದ ಬಗ್ಗೆ ಹಾಗೂ ನಿವೃತ್ತ ನ್ಯಾಯಮೂರ್ತಿಯವರ ಬಗ್ಗೆ ನಿಂದಿಸಿ ಕೆಟ್ಟದಾಗಿ ಮಾತನಾಡಿದ್ದಾರೆ. ಇದು ಅಹಂಕಾರದ ಪರಮಾವಧಿ. ಜೋಶಿ ಸಾಮಾನ್ಯ ವ್ಯಕ್ತಿಯಲ್ಲ, ಅವರೊಬ್ಬ ಕೇಂದ್ರ ಸಚಿವರು. ಸಂವಿಧಾನದಲ್ಲಿ ಸ್ವಾಯತ್ತ ಸಂಸ್ಥೆಗಳು, ಆಯೋಗಗಳ ಬಗ್ಗೆ ವೈಯುಕ್ತಿಕ ಟೀಕೆ ಸರಿಯಲ್ಲ. ಇದು ಪ್ರಜಾಪ್ರಭುತ್ವ ಮೌಲ್ಯಗಳಿಗೆ ವಿರುದ್ಧವಾಗಿದೆ. ಕಾನೂನು ಬಾಹಿರವಾಗಿದೆ.

- ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ರಾಜಭವನದಲ್ಲಿ ರಾಜ್ಯಪಾಲರ ಥಾವರ್ ಚಂದ್ ಗೆಹ್ಲೋಥ್ ಅವರನ್ನು ಭೇಟಿಯಾದ ಸಚಿವ ಕೃಷ್ಣಬೈರೇಗೌಡ, ದಿನೇಶ್ ಗುಂಡೂರಾವ್ ಅವರು ಪ್ರಲ್ಹಾದ್ ಜೋಶಿ ವಿರುದ್ಧ ಕ್ರಮವಹಿಸುವಂತೆ ಮನವಿ ಮಾಡಿದರು

ಕುನ್ಹಾ ಅವರನ್ನು ಏಜೆಂಟ್ ಎಂದಿಲ್ಲ: ದೂರು ದಾಖಲಾಗುತ್ತಿದ್ದಂತೆ ಈ ಬಗ್ಗೆ ಹಾವೇರಿಯಲ್ಲಿ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು, ನಾನು ಕುನ್ಹಾ ಅವರಿಗೆ ಏಜೆಂಟ್ ಅಂತ ಹೇಳಿಲ್ಲ. ಏಜೆಂಟರ ರೀತಿ ನಡೆದುಕೊಳ್ಳಬೇಡಿ ಅಂದಿದ್ದೇನೆ. ಅವರ ಮೇಲೆ ನನಗೆ ವೈಯಕ್ತಿಕ ದ್ವೇಷ, ಅಸೂಯೆಯಿಲ್ಲ ಎಂದು ಸ್ಪಷ್ಟಪಡಿಸಿದರು.

ಕಾಂಗ್ರೆಸ್‌ನವರು ತರಾತುರಿಯಲ್ಲಿ ವರದಿ ಕೊಡಿಸಿದ್ದಾರೆ. ಯಡಿಯೂರಪ್ಪ ಅವರಿಗೆ ನೋಟಿಸ್ ಬಂದಿಲ್ಲ. ಪ್ರಕ್ರಿಯೆ ನಡೆದಿಲ್ಲ. ಈ ರೀತಿ ಮಾಡಬೇಡಿ, ಪಾರದರ್ಶನವಾಗಿ ತನಿಖೆ ಮಾಡಿ ಅಂದಿದ್ದೇನೆ. ಕುನ್ಹಾ ಅವರಿಗೆ ಬೇಸರವಾಗಿದ್ದರೆ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದಿದ್ದಾರೆ.

ಗೋಯಲ್‌ಗೆ ಕಾಯಂ ಜಾಮೀನು

ಮುಂಬೈ: ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪಿ, ಜೆಟ್ ಏರ್‌ವೇಸ್ ಸಂಸ್ಥಾಪಕ ನರೇಶ್ ಗೋಯಲ್ ಅವರಿಗೆ ಬಾಂಬೆ ಹೈಕೋರ್ಟ್ ಸೋಮವಾರ ಕಾಯಂ ಜಾಮೀನು ಮಂಜೂರು ಮಾಡಿದೆ. ಈ ವರ್ಷದ ಮೇನಲ್ಲಿ ನ್ಯಾ. ಎನ್.ಜೆ.ಜಮಾದಾರ್ ಅವರ ಏಕ ಸದಸ್ಯ ಪೀಠ ವೈದ್ಯಕೀಯ ಕಾರಣಗಳಿಗಾಗಿ ಗೋಯಲ್ ಅವರಿಗೆ ಮಧ್ಯಂತರ ಜಾಮೀನು ನೀಡಿತ್ತು. ನ್ಯಾ. ಜಮಾದಾರ್ ಅವರು ಸೋಮವಾರ ಮಧ್ಯಂತರ ಆದೇಶವನ್ನು ಕಾಯಂಗೊಳಿಸಿದ್ದಾರೆ. ಗೋಯಲ್ (75) ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆಯಲು ಜಾಮೀನು ಕೋರಿದ್ದರು.

ಮಗು ಸಾವು: ಬಾಣಂತಿ ಆತ್ಮಹತ್ಯೆ

ಮಂಗಳೂರು: ನಗರದ ಲೇಡಿಗೋಷನ್ ಹೆರಿಗೆ ಆಸ್ಪತ್ರೆಯ ನಾಲ್ಕನೇ ಮಹಡಿಯಿಂದ ಜಿಗಿದು ಬಾಣಂತಿಯೊಬ್ಬರು ಸೋಮವಾರ ಆತ್ಮಹತ್ಯೆಮಾಡಿಕೊಂಡಿದ್ದಾರೆ. ಉಡುಪಿ ಜಿಲ್ಲೆಯ ಕಾರ್ಕಳದ ರಂಜಿತಾ ಆಚಾರ್ಯ (28) ಮೃತರು. ರಂಜಿತಾ ಅವರಿಗೆ ಅವಧಿ ಪೂರ್ವ ಪ್ರಸವವಾಗಿತ್ತು. ಅ.30ರಂದು ಸಿಸೇರಿಯನ್ ಮೂಲಕ ಹೆರಿಗೆ ನಡೆದಿತ್ತು. ಐಸಿಯುವಿನಲ್ಲಿ ಆರೈಕೆಯಲ್ಲಿದ್ದ ಶಿಶು ನ.3ರಂದು ಮೃತಪಟ್ಟಿತ್ತು. ಅದರಿಂದ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ತಿಳಿದುಬಂದಿದೆ.

ಸುಪ್ರೀಂಕೋರ್ಟ್‌ನಲ್ಲೂ ಪ್ರಜ್ವಲ್ ರೇವಣ್ಣ ಜಾಮೀನು ಅರ್ಜಿ ವಜಾ

ದೆಹಲಿ: ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಜಾಮೀನು ನಿರಾಕರಿಸಿರುವ ಹೈಕೋರ್ಟ್ ಆದೇಶ ಪ್ರಶ್ನಿಸಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ವಿಶೇಷ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಪೀಠವು ಅರ್ಜಿಯನ್ನು ತಿರಸ್ಕರಿಸಿತು ಮತ್ತು ಪ್ರಜ್ವಲ್ ಅತ್ಯಂತ ಪ್ರಭಾವಶಾಲಿ ವ್ಯಕ್ತಿ ಎಂಬುದನ್ನು ಗಣನೆಗೆ ತೆಗೆದುಕೊಂಡಿತು. ಪ್ರಜ್ವಲ್ ವಿರುದ್ಧದ ಆರೋಪಗಳು ಗಂಭೀರವಾದವು. ಹೀಗಾಗಿ, ಜಾಮೀನು ನಿರಾಕರಿಸಿ ಕರ್ನಾಟಕ ಹೈಕೋರ್ಟ್ ಅ.21ರಂದು ನೀಡಿರುವ ತೀರ್ಪಿನಲ್ಲಿ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ ಎಂದಿತು.

ಆರೋಪಿ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ಆರಂಭಿಕ ದೂರಿನಲ್ಲಿ ಐಪಿಸಿ ಸೆಕ್ಷನ್ 376 (ಅತ್ಯಾಚಾರ) ಬಗ್ಗೆ ನಿರ್ದಿಷ್ಟವಾಗಿ ಹೇಳಿರಲಿಲ್ಲ ಎಂದು ಗಮನ ಸೆಳೆದರು. ಕಕ್ಷಿದಾರರ ವಿರುದ್ಧ ದೂರು ಸಲ್ಲಿಕೆಯಾಗಿದ್ದು ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ. ಆಗ ಅವರು ವಿದೇಶದಲ್ಲಿದ್ದರು. ಬಳಿಕ ಪೊಲೀಸರಿಗೆ ಶರಣಾದರು. ಸಂಸದರಾಗಿದ್ದ ಅವರು ಲೋಕಸಭಾ ಚುನಾವಣೆಯಲ್ಲಿ ಸೋತಿದ್ದಾರೆ ಎಂದು ಅವರು ಪೀಠದ ಗಮನಕ್ಕೆ ತಂದರು. ಆರು ತಿಂಗಳ ನಂತರ ಅರ್ಜಿಯನ್ನು ನವೀಕರಿಸಲು ಅರ್ಜಿದಾರರಿಗೆ ಅವಕಾಶ ನೀಡುವಂತೆ ವಕೀಲರು ನ್ಯಾಯಾಲಯವನ್ನು ಕೋರಿದರು. 'ನಾವು ಏನನ್ನೂ ಹೇಳುವುದಿಲ್ಲ' ಎಂದು ಪೀಠ ಹೇಳಿತು.

ನಟ ವಿಜಯ್ ಜೈಲಿಂದ ಬಿಡಿಸಿದ್ದ ಆರೋಪಿಯಿಂದ ಜೋಡಿ ಕೊಲೆ

ಬೆಂಗಳೂರು: ನಗರದ ಹೊರವಲಯದಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಡಬಲ್ ಮರ್ಡರ್ ಮಾಡಿರುವ ಆರೋಪಿಯನ್ನು ಈ ಹಿಂದೆ ಪ್ರಕರಣ ವೊಂದರಲ್ಲಿ ಸ್ಯಾಂಡಲ್‌ವುಡ್ ನಟ ದುನಿಯಾ ವಿಜಯ್ ಜೈಲಿಂದ ಬಿಡಿಸಿ ದ್ದರು ಎಂಬ ಮಾಹಿತಿ ಹೊರಬಿದ್ದಿದೆ. ಆದರೆ, ದುನಿಯಾ ವಿಜಿ ಅವರ ಆಶಯವನ್ನು ಕೊಲೆ ಪಾತಕಿ ವ್ಯರ್ಥ ಮಾಡಿದ್ದಾನೆ.

ಬಾಗಲೂರು ಡಬಲ್ ಮರ್ಡರ್ ಆರೋಪಿ ಸುರೇಶ್‌ಗೆ ಈ ಹಿಂದೆ ಪ್ರಕರಣವೊಂದರಲ್ಲಿ ಶ್ಯೂರಿಟಿ ಹಣ ನೀಡಿ ದುನಿಯಾ ವಿಜಯ್ ಬಿಡಿಸಿದ್ದರು. ಈ ಹಿಂದೆ ಡಬಲ್ ಮರ್ಡರ್ ಪ್ರಕರಣ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಆರೋಪಿ ಸುರೇಶ್ ಜೈಲು ಸೇರಿದ್ದ. ಅಪರಾಧಿಗಳಿಗೆ ತಲಾ ಮೂರು ಲಕ್ಷದಂತೆ ಶ್ಯೂರಿಟಿ ಹಣವನ್ನು ನಟ ವಿಜಯ್ ಕಟ್ಟಿದ್ದರು. ಈ ವೇಳೆ ಸುರೇಶ್‌ಗೂ ಮೂರು ಲಕ್ಷ ಶ್ಯೂರಿಟಿ ಹಣ ನೀಡಿ ಜೈಲಿಂದ ಬಿಡುಗಡೆಗೊಳಿಸಿದ್ದರು.

ಪುಟಿನ್‌ಗೆ ಟ್ರಂಪ್ ಕರೆ: ಯುದ್ಧ ವಿರಾಮಕ್ಕೆ ಸಲಹೆ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷರಾಗಿ ಚುನಾಯಿತರಾದ ಡೊನಾಲ್ಡ್ ಟ್ರಂಪ್, ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವ ಕುರಿತು ಮತ್ತು ಹಲವು ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ಯುರೋಪ್‌ನಲ್ಲಿ ಶಾಂತಿ ಸ್ಥಾಪನೆ, ಉಕ್ರೇನ್ ಯುದ್ಧ ಅಂತ್ಯಕ್ಕೆ ತಂತ್ರಗಳು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ಉಕ್ರೇನ್‌ನಲ್ಲಿ ಯುದ್ಧವನ್ನು ಹೆಚ್ಚಿಸದಂತೆಯೂ ಪುಟಿನ್‌ಗೆ ಟ್ರಂಪ್ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಪಟಾಕಿ ನಿಷೇಧ: ದೆಹಲಿ ಪೊಲೀಸರಿಗೆ ಸುಪ್ರೀಂ ತರಾಟೆ

ದೆಹಲಿ: ದೆಹಲಿಯಲ್ಲಿ ಪಟಾಕಿ ನಿಷೇಧವನ್ನು ಜಾರಿಗೊಳಿಸಲು ವಿಫಲರಾಗಿರುವ ಪೊಲೀಸರನ್ನು ಸುಪ್ರೀಂಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ತಕ್ಷಣವೇ ಪಟಾಕಿ ನಿಷೇಧ ಆದೇಶದ ಬಗ್ಗೆ ಸಂಬಂಧಿಸಿದ ಎಲ್ಲ ಪಟಾಕಿ ತಯಾರಕರಿಗೆ ತಿಳಿಸಲು ಮತ್ತು ಪಟಾಕಿಗಳ ಮಾರಾಟ ಹಾಗೂ ತಯಾರಿಕೆಯನ್ನು ಖಚಿತಪಡಿಸಿಕೊಳ್ಳುವಂತೆ ದೆಹಲಿ ಪೊಲೀಸ್ ಕಮಿಷನರ್‌ಗೆ ನಿರ್ದೇಶಿಸಿದೆ. ನ.25ರೊಳಗೆ ಪಟಾಕಿ ತಯಾರಕೆದಾರರೊಂದಿಗೆ ಚರ್ಚೆ ನಡೆಸಿ ಶಾಶ್ವತ ಪಟಾಕಿ ನಿಷೇಧದ ಬಗ್ಗೆ ನಿರ್ಧರಿಸುವಂತೆ ದೆಹಲಿ ಸರಕಾರಕ್ಕೂ ತಾಕೀತು ಮಾಡಿದೆ.

ಕಾಡಾನೆಗಳ ಹಾವಳಿ; ನಿಷೇಧಾಜ್ಞೆ ಜಾರಿ

ಚಿಕ್ಕಮಗಳೂರು: ಮಲೆನಾಡಿನ ಕೆಲವು ಗ್ರಾಮಗಳಲ್ಲಿ ಕಾಡಾನೆಗಳ ಉಪಟಳ ಹೆಚ್ಚಾಗಿರುವ ಹಿನ್ನಲೆ ಮುನ್ನೆಚ್ಚರಿಕಾ ಕ್ರಮವಾಗಿ 11 ಗ್ರಾಮಗಳಲ್ಲಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ. ಮೂಗ್ತಿಹಳ್ಳಿ ಮತ್ತು ವಸ್ತಾರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಾದ ಮತ್ತಾವರ, ದಂಬದಹಳ್ಳಿ, ಶಿರಗುಂದ, ದುಂಗೆರೆ, ಮೂಗ್ತಿಹಳ್ಳಿ, ಕದ್ರಿಮಿದ್ರಿ, ಆಲದಗುಡ್ಡೆ, ನಂದಿಕೆರೆ, ದಹಲುವಾಲೆ, ತೊಂಡವಳಿ, ಸಂಸೆ, ದಿಣ್ಣೆಕರೆ, ಗ್ರಾಮಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಗ್ರಾಮಗಳಲ್ಲಿ ಶಾಲಾ, ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ.

ಸನಾತನ ಹಿಂದೂ ಮಂಡಳಿ ರಚನೆ ಮಾಡಲು ಕೇಂದ್ರಕ್ಕೆ ಶಿಫಾರಸ್ಸು ಪತ್ರ ಬರೆಯಲು ಒತ್ತಾಯ

ವಕ್ಫ್ ಬೋರ್ಡ್ ವಿರುದ್ಧ ಮಠಾಧೀಶರ ಆಕ್ರೋಶ

ಕಲಬುರಗಿ: ನೂರಾರು ವರ್ಷಗಳಿಂದ ಉಳುಮೆ ಮಾಡುತ್ತಿರುವ ರೈತರ ಜಮೀನು, ಮಠ, ಮಂದಿರಗಳ ಆಸ್ತಿಗಳ ಮೇಲೆ ವಕ್ಫ್ ಬೋರ್ಡ್ ಹೆಸರನ್ನು ಬದಲಾವಣೆ ಮಾಡುತ್ತಿರುವುದನ್ನು ತಡೆಹಿಡಿದು, ಕೂಡಲೇ ವಕ್ಫ್ ಆಸ್ತಿ ರಾಷ್ಟ್ರೀಕರಣಗೊಳಿಸಬೇಕು ಎಂದು ಆಗ್ರಹಿಸಿ ಹಿಂದೂ ನಾಗರಿಕ ವೇದಿಕೆ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸೋಮವಾರ ನಗರದ ಸರ್ದಾರ್ ವಲ್ಲಭ ಭಾಯಿ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೂ ಹತ್ತಾರು ಮಠಾಧೀಶರು ಹಾಗೂ ನೂರಾರು ಹಿಂದೂ ನಾಗರಿಕ ವೇದಿಕೆಯ ಕಾರ್ಯಕರ್ತರು ವಕ್ಫ್ ಬೋರ್ಡ್ ಹಾಗೂ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಘೋಷಣೆ ಕೂಗುತ್ತಾ ಆಕ್ರೋಶ ಹೊರಹಾಕಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ವಕ್ಫ್ ಬೋರ್ಡ್‌ನ ಆಸ್ತಿ ರಾಷ್ಟ್ರೀಕರಣಗೊಳಿಸದಿದ್ದರೆ, ಬೋರ್ಡ್ ಅನ್ನು ತಕ್ಷಣವೇ ರದ್ದು ಮಾಡಬೇಕು. ಒಂದು ವೇಳೆ ಬೋರ್ಡ್ ರದ್ದಾಗದಿದ್ದರೆ, ಹಿಂದುಗಳಿಗೂ ಸನಾತನ ಹಿಂದೂ ಮಂಡಳಿ ರಚನೆ ಮಾಡಲು ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಪತ್ರ ಬರೆಯಬೇಕು ಎಂದು ಒತ್ತಾಯಿಸಿದರು.

→ 4

ವಕ್ಫ ಆಸ್ತಿ ರಾಷ್ಟ್ರೀಕರಣಗೊಳಿಸಬೇಕು ಎಂದು ಹಿಂದೂ ನಾಗರಿಕ ವೇದಿಕೆ ನೇತೃತ್ವ ದಲ್ಲಿ ವಿವಿಧ ಮಠಾಧೀಶರು ಆಗ್ರಹಿಸಿದರು.

ಸ್ವಾಮೀಜಿ ವಿರುದ್ಧ ಎಫ್‌ಐಆರ್

ಅಫಜಲಪುರ: ವಕ್ಫ್ ಬೋರ್ಡ್ ವಿರುದ್ಧ ಪ್ರತಿಭಟನೆ ನಡೆಸುವ ವೇಳೆ 'ಎಲ್ಲ ಯುವಕರ ಮನೆಯಲ್ಲಿ ತಲ್ವಾರ್ ಇವೆ, ಯಾರು ಬರುತ್ತಾರೆ ಅವರನ್ನು ಕಡಿಯುತ್ತೇವೆ ಎಂದು ಕೆಲವರು ಹೇಳುತ್ತಿದ್ದಾರೆ. ಹಾಗಾಗಿ ಇನ್ಮುಂದೆ ಮಕ್ಕಳ ಕೈಯಲ್ಲಿ ಪೆನ್ ಕೊಡುವ ಬದಲು ತಲ್ವಾರ್ ಕೊಡಬೇಕಾ ಗುತ್ತದೆ' ಎಂದು ಹೇಳಿರುವ ಮಾಶಾಳದ ಶ್ರೀ ಮರುಳಾರಾಧ್ಯ ಸ್ವಾಮೀಜಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಸಮಾಚಾರ ಸಣ್ಣದಲ್ಲ

ಯುವಕ ನೇಣಿಗೆ ಶರಣು

ಬೆಂಗಳೂರು: ಪಿತ್ರಾರ್ಜಿತ ಆಸ್ತಿ ವಿಚಾರದಲ್ಲಿ ಮನನೊಂದ ಯುವಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವಂತಹ ಘಟನೆ ನೆಲಮಂಗಲದಲ್ಲಿ ನಡೆದಿದೆ. ಶಿವನಗರದ ಪೃಥ್ವಿ(20) ಮೃತ ಯುವಕ. ಬಿಎ ಓದಿಕೊಂದಿದ್ದು ಚಾಲಕನಾಗಿದ್ದ ಕೆಲಸ ಮಾಡುತ್ತಿದ್ದ. ಅಜ್ಜಿ ಕುಳಯಮ್ಮ ಮತ್ತಿಕೆರೆಯ ಮನೆಯೊಂದನ್ನ ತನ್ನ ಮಗನ ಮಕ್ಕಳಿಗೆ ಆಸ್ತಿ ಕೊಡದೆ ಹೆಣ್ಣು ಮಗಳಿಗೆ ಕೊಟ್ಟಿರುವ ಆರೋಪ ಕೇಳಿಬಂದಿದೆ. ಈ ವಿಷಯವಾಗಿ ಸಂಬಂಧಿಕರನ್ನ ಸೇರಿಸಿ ಮಾತುಕತೆ ಮಾಡಲಾಗಿದ್ದು, ಆದರೆ ಮಾತುಕತೆ ವಿಫಲವಾಗಿದೆ. ಈ ಘಟನೆಯಿಂದ ಮನನೊಂದ ಪೃಥ್ವಿ, ಮನೆಯ ಕೋಣೆಯಲ್ಲಿ ವೇಲ್ ಬಳಸಿ ಫ್ಯಾನ್‌ಗೆ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿದ್ದಾನೆ. ನೆಲಮಂಗಲ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೇಯಸಿ ತಾಯಿಗಾಗಿ ಚೈನ್ ಕಳ್ಳತನ: ಬಂಧನ

ಬೆಂಗಳೂರು: ಪ್ರೇಯಸಿಯ ತಾಯಿಯ ಚಿಕಿತ್ಸೆಗಾಗಿ ಚೈನ್ ಕದಿಯುತ್ತಿದ್ದ ಡ್ಯಾನ್ಸ್ ಮಾಸ್ಟರ್‌ನನ್ನು ಜಿಗಣಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ಗದಗ ಜಿಲ್ಲೆಯ ಲಕ್ಷ್ಮೇಶ್ವರ ತಾಲೂಕಿನ ಹುಲ್ಲೂರು ನಿವಾಸಿ ಸೈಯ್ಯದ್ ಅಲಿ ಬಾಳಸಾಹೇಬ್ ನಡಾಫ್ (25) ಎಂದು ಗುರುತಿಸಲಾಗಿದೆ. ನಡಾಫ್‌ನ ಪ್ರೇಯಸಿಯ ತಾಯಿ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರು. ಅವರ ಚಿಕಿತ್ಸೆಗಾಗಿ ಆರೋಪಿ ಚೈನ್ ಕಳ್ಳತನಕ್ಕೆ ಇಳಿದಿದ್ದ. ಕಳೆದ ಆಗ ಆರೋಪಿ ಜಿಗಣಿಯ ರತ್ನಮ್ಮ ಎಂಬವರ ಸರವನ್ನು ಕಳ್ಳತನ ಮಾಡಿದ್ದ. ಬುಲೆಟ್ ಬೈಕ್‌ನಲ್ಲಿ ಬಂದು ಸಿಗರೇಟ್ ಖರೀದಿಸುವ ನೆಪದಲ್ಲಿ ಮಾಂಗಲ್ಯದ ಸರ ಎಗರಿಸಿದ್ದ. ಈ ದೃಶ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಬಂಧಿತ ಆರೋಪಿಯಿಂದ 8 ಲಕ್ಷ ರು. ಮೌಲ್ಯದ ಚಿನ್ನಾಭರಣ, 2 ಬೈಕ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಚಾಲಕನ ಮೇಲೆ ಬೈಕ್ ಸವಾರ ಹಲ್ಲೆ

ಬೆಂಗಳೂರು: ಸಿನಿಮೀಯ ರೀತಿಯಲ್ಲಿ ಬಸ್ ಅನ್ನು ಹಿಂಬಾಲಿಸಿಕೊಂಡು ಹೋಗಿ ಬಿಎಂಟಿಸಿ ಬಸ್ ಚಾಲಕನ ಮೇಲೆ ಬೈಕ್ ಸವಾರ ಹಲ್ಲೆ ಮಾಡಿರುವ ಘಟನೆ ನಗರದ ಮೈಸೂರು ರಸ್ತೆಯ ಹಳೆಗುಡ್ಡದಹಳ್ಳಿ ಬಳಿ ನಡೆದಿದೆ. ಆರೋಪಿಯನ್ನು ಮಲ್ಲೇಶ್ವರ ನಿವಾಸಿಯಾಗಿರುವ 36 ವರ್ಷದ ಕಮಲ್ ಸಿಂಗ್ ಎಂದು ಗುರುತಿಸಲಾಗಿದೆ. ಭಾನುವಾರ ರಾತ್ರಿ 8 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ದೀಪಾಂಜಲಿನಗರದ ಡಿಪೋ ನಂ.16ಕ್ಕೆ ಸೇರಿದ ಕೆಎ-47ಎಫ್ 4034 ಬಸ್ಸು 60 ಎ/8 ವಿಜಯನಗರದಿಂದ ಜಯನಗರ ಸಂಚಾರ ಮಾಡುತ್ತಿದ್ದ ವೇಳೆ ಬಸ್ಸಿನ ಚಾಲಕ ಮುರ್ತುಜಾ ಸಾಬ್ ಎಂಬವರ ಮೇಲೆ ಹಲ್ಲೆ ನಡೆದಿದೆ. ಕಳೆದ ಮೂರು ತಿಂಗಳಲ್ಲಿ 6 ಹಲ್ಲೆ ಪ್ರಕರಣ ನಡೆದಿದ್ದು, ನವೆಂಬರ್ ತಿಂಗಳಲ್ಲಿ ನಡೆದ ಮೊದಲ ಘಟನೆ ಇದಾಗಿದೆ.

ವಿರಾಮ
ಪ್ರತಿ ಭಾನುವಾರ

ರಾಜಧಾನಿಗೆ ನೇಪಾಳಿ ಕಳ್ಳರ ಕಂಟಕ

ಸಿಲಿಕಾನ್ ಸಿಟಿಯಲ್ಲಿ ನೇಪಾಳಿ ಕಳ್ಳರ ಕಂಟಕ ಹೆಚ್ಚಾಗುತ್ತಿದ್ದು, ಶ್ರೀಮಂತರ ಮನೆಗಳನ್ನು ಟಾರ್ಗೆಟ್ ಮಾಡಿಕೊಂಡು ಕಳ್ಳತನಕ್ಕಿಳಿದಿದ್ದಾರೆ. ಮುಗ್ಧರಂತೆ ಮನೆಗೆಲಸಕ್ಕೆ ಸೇರಿಕೊಳ್ಳುವ ನೇಪಾಳಿಗರು ಮನೆಯ ಸಂಪೂರ್ಣ ಮಾಹಿತಿ ತಿಳಿದು ಉಂಡ ಮನೆಗೆ ಕನ್ನ ಹಾಕುತ್ತಾರೆ. ಸೆಕ್ಯೂರಿಟಿ, ಮನೆಗೆಲಸ ಎಂದು ದಂಪತಿಯೊಂದಿಗೆ ಸೇರಿ ದರೋಡೆ ಮಾಡುತ್ತಾರೆ. ಸಾಲು ಸಾಲು ಪ್ರಕರಣಗಳು ವರದಿಯಾಗಿವೆ. ಮನೆಗೆಲಸ, ಸೆಕ್ಯೂರಿಟಿ ಕೆಲಸಗಳನ್ನೇ ಇವರು ಮುಖ್ಯ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಮನೆ, ಫ್ಲ್ಯಾಟ್‌ಗಳಲ್ಲಿ ಯಾರು ಇಲ್ಲದ ಸಮಯ ನೋಡಿ ಯೋಜನೆ ಹಾಕಿ, ಬಳಿಕ ಕಾರ್ಯರೂಪಕ್ಕೆ ತರುವ ಚಾಲಾಕಿ ಕಳ್ಳರಾಗಿದ್ದಾರೆ.

ನೇಪಾಳಿ ಕಳ್ಳರ ಮೇಲೆ ದಾಖಲಾದ ಪ್ರಕರಣಗಳು

1. 2021ರ ಏಪ್ರಿಲ್‌ನಲ್ಲಿ ಡಿಜೆ ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಸೇನಾಧಿಕಾರಿ ಮನೆಯಲ್ಲಿ ಕಳ್ಳತನವಾಗಿತ್ತು. ಪಕ್ಕದ ಅಪಾರ್ಟ್ಮೆಂಟ್‌ನಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳಾಗಿದ್ದ ನಾಲ್ವರು ನೇಪಾಳಿಗರು ಸೇರಿ ಕಳ್ಳತನಕ್ಕೆ ಹೊಂಚು ಹಾಕಿದ್ದರು. ಕಳ್ಳತನ ಮಾಡಿ 70 ಲಕ್ಷ ರು. ಮೌಲ್ಯದ ಚಿನ್ನಾಭರಣ, ಹಣಗಳ್ಳತನ ಮಾಡಿದ್ದರು. ಪೊಲೀಸರು ಆರೋಪಿಗಳನ್ನು ನೇಪಾಳಕ್ಕೆ ಪರಾರಿಯಾಗುತ್ತಿದ್ದ ಮಾರ್ಗದಲ್ಲಿ ಬಂಧಿಸಿದ್ದರು.

2. 2021ರ ಡಿಸೆಂಬರ್‌ನಲ್ಲಿ ಹೆಣ್ಣೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಉದ್ಯಮಿ ಮನೆಯಲ್ಲಿ ಕಳ್ಳತನವಾಗಿತ್ತು. ಅಪಾರ್ಟ್ಮೆಂಟ್‌ನಲ್ಲಿ ಸೆಕ್ಯೂರಿಟಿಯಾಗಿದ್ದ ನಾಲ್ವರು ನೇಪಾಳಿಗಳು ಕೃತ್ಯ ಎಸಗಿದ್ದು, ಮನೆಯಲ್ಲಿ ಯಾರೂ ಇಲ್ಲದ ಸಮಯ ನೋಡಿ ಆಂಧ್ರ ಮೂಲದ ಉದ್ಯಮಿ ಫ್ಲ್ಯಾಟ್‌ನಲ್ಲಿ 50 ಲಕ್ಷ ರು. ಮೌಲ್ಯದ ಚಿನ್ನಾಭರಣ ನಗದು ಕಳ್ಳತನ ಮಾಡಿದ್ದರು. ಪೊಲೀಸರು ಆರೋಪಿಗಳನ್ನು ನೇಪಾಳಕ್ಕೆ ಪರಾರಿಯಾಗುವ ಮುನ್ನವೇ ಬಂಧಿಸಿದ್ದರು.

3. 2023 ನವೆಂಬರ್‌ನಲ್ಲಿ ಮಹಾಲಕ್ಷ್ಮೀ ಲೇಔಟ್‌ನ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಸಹೋದರ ಭ್ರಮರೇಶ್ ಮನೆಯಲ್ಲಿ ಮನೆಗಳ್ಳತನವಾಗಿತ್ತು. ಭ್ರಮರೇಶ್ ಪಕ್ಕದ ಮನೆಯಲ್ಲಿ ಕೆಲಸಕ್ಕಿದ್ದ ಕೆಲ ಆರೋಪಿಗಳು ಕಳ್ಳತನ ಮಾಡಿದ್ದರು. ಭ್ರಮರೇಶ್ ಕುಟುಂಬ ವಿದೇಶಕ್ಕೆ ಹೋಗಿದ್ದಾಗ 7 ಜನರು ಕೃತ್ಯ ಎಸಗಿದ್ದು, 1.53 ಕೋಟಿ ಮೌಲ್ಯದ ಚಿನ್ನಾಭರಣ, ನಗದು ಕದ್ದಿದ್ದರು.

4. 2024 ಏಪ್ರಿಲ್‌ನಲ್ಲಿ ಸಂಜಯ ನಗರದಲ್ಲಿರುವ ಮಾಜಿ ಮೇಯರ್ ನಾರಾಯಣ ಸ್ವಾಮಿ ಮನೆ ದರೋಡೆಯಾಗಿತ್ತು. ಅವರು ಚುನಾವಣಾ ಪ್ರಚಾರಕ್ಕೆ ಹೋಗಿದ್ದಾಗ ಅದೇ ಮನೆಯ ಸೆಕ್ಯೂರಿಟಿ ಗಾರ್ಡ್ ಆಗಿದ್ದ ವ್ಯಕ್ತಿ, ತನ್ನ ಸಹಚರನೊಂದಿಗೆ ಸೇರಿ ದರೋಡೆ ಮಾಡಿದ್ದ. 1.30 ಕೋಟಿ ರು. ಮೌಲ್ಯದ ಚಿನ್ನಾಭರಣ, ನಗದು ದರೋಡೆಯಾಗಿತ್ತು. ಇದನ್ನು ಕೂಡ ಭ್ರಮರೇಶ್ ಮನೆ ದೋಚಿದ್ದ ಅಸಾಮಿಯೇ ಮಾಡಿದ್ದ. ಆದರೆ ಜೈಲು ಸೇರಿದ 6 ತಿಂಗಳಲ್ಲಿ ಜಾಮೀನು ಪಡೆದು ನಾರಾಯಣಸ್ವಾಮಿ ಮನೆ ಕೆಲಸಕ್ಕೆ ಸೇರಿದ್ದ. ಪೊಲೀಸರು ಹಿಡಿಯುವ ಮುನ್ನವೇ ಇಬ್ಬರು ನೇಪಾಳ ಸೇರಿದ್ದರು. ಆದರೆ ಪೊಲೀಸರು ನೇಪಾಳಕ್ಕೆ ತಲುಪಿ ಆರೋಪಿ ಪತ್ತೆ ಮಾಡಿದರೂ ಏನು ಪ್ರಯೋಜನವಾಗಿರಲಿಲ್ಲ.

5. ವಾರದ ಹಿಂದೆ ಜಯನಗರದಲ್ಲಿ ಸಂಪಿಗೆ ಥಿಯೇಟರ್ ಮಾಲೀಕನ ಮನೆಯಲ್ಲಿ ದರೋಡೆಯಾಗಿತ್ತು. ಮನೆಯಲ್ಲಿ ಕೆಲಸಕ್ಕಿದ್ದ ನೇಪಾಳಿ ದಂಪತಿ ಮನೆಯಲ್ಲಿ ಬೇರೆ ಯಾರು ಇಲ್ಲದಾಗ ಮಾಲೀಕರನ್ನೇ ಕಟ್ಟಿಹಾಕಿ 38 ಲಕ್ಷ ಮೌಲ್ಯದ 1 ಕೆಜಿ ಚಿನ್ನಾಭರಣ, 1.5 ಲಕ್ಷ ರು. ನಗದು ದರೋಡೆ ಮಾಡಿದ್ದರು. ಬಳಿಕ ಅವರನ್ನು ಬಂಧಿಸಲಾಯಿತು.

6. ವಿಜಯನಗರದಲ್ಲಿ ಜ್ಯುವೆಲರಿ ಶಾಪ್ ಮಾಲೀಕರ ಮನೆ ದರೋಡೆ ಮಾಡಿ, ಬರೋಬ್ಬರಿ 15 ಕೋಟಿ ರು. ಮೌಲ್ಯದ ಚಿನ್ನಾಭರಣ ಜತೆ 40 ಲಕ್ಷ ರು. ನಗದು ದೋಚಿಕೊಂಡು ಹೋಗಿದ್ದರು. ಮನೆ ಮಾಲೀಕರು ಕುಟುಂಬ ಸಮೇತ ಗುಜರಾತ್‌ಗೆ ಹೋದಾಗ ಜ್ಯುವೆಲ್ಲರಿ ಶಾಪ್ ಜತೆ ಮನೆ ಕೆಲಸಕ್ಕೂ ಇದ್ದ ದಂಪತಿ ಈ ಕೃತ್ಯ ಎಸಗಿದ್ದಾರೆ. ನಾಲ್ಕು ಜನರ ನೇಪಾಳಿ ಗ್ಯಾಗ್‌ನಿಂದ ದರೋಡೆ ನಡೆದಿರುವ ಶಂಕೆ ವ್ಯಕ್ತವಾಗಿದೆ. ಸದ್ಯ ಆರೋಪಿಗಳು ನೇಪಾಳಕ್ಕೆ ಪರಾರಿಯಾಗಿರುವ ಮಾಹಿತಿಯಿದ್ದು, ಈಗಾಗಲೇ ಪೊಲೀಸ್ ತಂಡ ನೇಪಾಳಕ್ಕೆ ತೆರಳಿದೆ.

ನೇಪಾಳಿ ಕಳ್ಳರ ಬಂಧನವೇ ಸವಾಲು

ನೇಪಾಳಿ ಕಳ್ಳರನ್ನು ಹಿಡಿಯುವುದೇ ಒಂದು ದೊಡ್ಡ ಸವಾಲಾಗಿದ್ದು, ಒಮ್ಮೆ ದರೋಡೆ ಮಾಡಿ ಬೆಂಗಳೂರು ಬಿಟ್ಟರೆ ನೇಪಾಳಿ ಗ್ಯಾಂಗ್ ಹಿಡಿಯುವುದು ಕಷ್ಟದ ಕೆಲಸ. ಅವರನ್ನು ನೇಪಾಳ ಸೇರುವ ಮುನ್ನವೇ ಹಿಡಿಯಬೇಕಾಗಿದೆ. ರಾಜತಾಂತ್ರಿಕ ಸಮಸ್ಯೆಯಿಂದಾಗಿ ಅವರು ಒಮ್ಮೆ ನೇಪಾಳಕ್ಕೆ ಹೋದರೆ ಅವರನ್ನು ಮತ್ತೆ ಬಂಧಿಸುವುದು ಕಷ್ಟ. ಇದನ್ನೇ ಬಂಡವಾಳವಾಗಿಸಿಕೊಂಡು ನೇಪಾಳಿಗರು ಕಳ್ಳತನಕ್ಕಿಳಿದಿದ್ದಾರೆ. ಪೊಲೀಸರು ದೇಶದೊಳಗೆ ಬಂಧನ ಮಾಡಲು ಶತಪ್ರಯತ್ನ ಮಾಡಿದರೂ ಸಾಧ್ಯವಾಗುತ್ತಿಲ್ಲ. ಬಂಧಿಸಿದರೂ ಜಾಮೀನು ಪಡೆದು ಮತ್ತೆ ಅದೇ ಕೆಲಸಕ್ಕಿಳಿಯುತ್ತಾರೆ. ಹೀಗಾಗಿ ನೇಪಾಳಿ ಕೆಲಸಗಾರರಿಂದ ಎಚ್ಚರಿಕೆಯಿಂದ ಇರುವಂತೆ ಪೊಲೀಸರು ಸೂಚನೆ ನೀಡಿದ್ದಾರೆ.

ಮದ್ಯ ಸೇವಿಸಿ ಶಾಲಾ ವಾಹನ ಚಾಲನೆ: 10 ತಿಂಗಳಲ್ಲಿ 120 ಪ್ರಕರಣ ದಾಖಲು

ಬೆಂಗಳೂರು: ನಗರದಲ್ಲಿ ಪಾನಮತ್ತರಾಗಿ ಶಾಲಾ ವಾಹನ ಚಲಾಯಿಸುವವರ ಪತ್ತೆಗಾಗಿ ಬೆಂಗಳೂರು ಸಂಚಾರಿ ಪೊಲೀಸರು ನಿರಂತರವಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕಳೆದ 10 ತಿಂಗಳಲ್ಲಿ ಶಾಲಾ ವಾಹನಗಳ 120 ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಜತೆಗೆ, ಪಾನಪತ್ತ ಚಾಲಕ ಚಾಲನಾ ಪರವಾನಗಿ ರದ್ದುಗೊಳಿಸಲು ಸಾರಿಗೆ ಇಲಾಖೆಗೆ ಸಂಚಾರಿ ಪೊಲೀಸರು ಶಿಫಾರಸು ಮಾಡಿದ್ದಾರೆ. ಆದರೂ ಸಹ ಮದ್ಯಪಾನ ಮಾಡಿ ಶಾಲಾ ವಾಹನ ಚಲಾಯಿಸುವವರ ಸಂಖ್ಯೆ ಕಡಿಮೆಯಾಗುತ್ತಿಲ್ಲ ಎಂಬ ಮಾಹಿತಿ ಅಂಕಿಅಂಶಗಳಿಂದ ತಿಳಿದು ಬಂದಿದೆ.

20 ಸಾವಿರ ಶಾಲಾ ವಾಹನ ತಪಾಸಣೆ: ಬೆಂಗಳೂರಲ್ಲಿ ಬೆಳಗಿನ ವೇಳೆಯೇ ಕಾರ್ಯಾಚರಣೆಗೆ ಇಳಿಯುವ ಸಂಚಾರಿ ಪೊಲೀಸರು, ಕಳೆದ 10 ತಿಂಗಳ ಅವಧಿಯಲ್ಲಿ ಸರಿಸುಮಾರು 20 ಸಾವಿರ ಶಾಲಾ ವಾಹನಗಳನ್ನು ತಪಾಸಣೆಗೊಳ ಪಡಿಸಿದ್ದಾರೆ. ಈ ಪೈಕಿ 120 ಚಾಲಕರು ಪಾನಮತ್ತರಾಗಿ ವಾಹನ ಚಲಾಯಿಸಿರುವುದು ಪತ್ತೆಯಾಗಿದೆ. ಈ ಕುರಿತು ಜನವರಿಯಲ್ಲಿ 16, ಫೆಬ್ರವರಿಯಲ್ಲಿ 7, ಜುಲೈನಲ್ಲಿ 23, ಆಗಸ್ಟ್‌ನಲ್ಲಿ 26, ಸೆಪ್ಟೆಂಬರ್‌ನಲ್ಲಿ 22, ನವೆಂಬರ್‌ನಲ್ಲಿ 24 ಪ್ರಕರಣ



ದಾಖಲಾಗಿವೆ. ಈ ಬಗ್ಗೆ ಎಚ್ಚರಿಕೆ ನೀಡಿದರೂ ಸಹ ಪ್ರತಿ ಬಾರಿ ವಿಶೇಷ ಕಾರ್ಯಾಚರಣೆ ಕೈಗೊಂಡಾಗಲೂ ಪಾನಮತ್ತ ಶಾಲಾ ವಾಹನ ಚಾಲಕರು ಸಿಕ್ಕಿ ಬೀಳುತ್ತಿರುವುದು ಮಕ್ಕಳ ಪೋಷಕರ ಆತಂಕಕ್ಕೆ ಕಾರಣವಾಗಿದೆ.

ಪಾನಮತ್ತರಾಗಿ ಶಾಲಾ ವಾಹನ ಚಾಲನೆ ಹಾಗೂ ಶಾಲಾ ವಾಹನಗಳಲ್ಲಿ ಹೆಚ್ಚುವರಿಯಾಗಿ ಮಕ್ಕಳನ್ನು ಕರೆದೊಯ್ಯುತ್ತಿರುವುದರ ಕುರಿತು ನಿರಂತರವಾಗಿ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಶಾಲಾ ಆಡಳಿತ ಮಂಡಳಿಗಳಿಗೂ ನೋಟಿಸ್ ನೀಡಲಾಗುತ್ತಿದೆ. ಸುರಕ್ಷತೆಯ ದೃಷ್ಟಿಯಿಂದ ಮುಂದಿನ ದಿನಗಳಲ್ಲಿಯೂ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುತ್ತದೆ ಎಂದು ಬೆಂಗಳೂರು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

ಪರವಾನಗಿ ರದ್ದು

ಕಳೆದ 10 ತಿಂಗಳಿನಿಂದ ನಗರದಲ್ಲಿ ಬೆಳಗಿನ ಸಂದರ್ಭದಲ್ಲಿ ಶಾಲಾ ವಾಹನ ಚಾಲಕರ ತಪಾಸಣೆ ಮಾಡುತ್ತಿದ್ದೇವೆ. ಜನವರಿಂದ ಈವರೆಗೆ 12 ವಿಶೇಷ ಕಾರ್ಯಾಚರಣೆ ನಡೆಸಿ, 20 ಸಾವಿರ ಜನರನ್ನು ತಪಾಸಣೆ ಮಾಡಲಾಗಿದೆ. 120 ಜನ ಪಾನಮತ್ತ ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಿ, ಅವರ ಡ್ರೈವಿಂಗ್ ಲೈಸೆನ್ಸ್ ಸಸ್ಪೆಂಡ್ ಮಾಡಲಾಗುತ್ತಿದೆ. ಈ ಬಗ್ಗೆ ಶಾಲಾ ಆಡಳಿತ ಮಂಡಳಿಗೂ ಕೂಡ ನೋಟಿಸ್ ನೀಡಲಾಗಿದೆ. ಗುತ್ತಿಗೆ ಆಧಾರದ ಟ್ರಾವೆಲ್ಸ್ ಚಾಲಕರಿಂದ ಹೆಚ್ಚು ನಿಯಮ ಉಲ್ಲಂಘನೆಯಾಗುತ್ತಿದೆ. ಅಂತಹವರ ವಿರುದ್ಧ ಶಾಲಾ ವಾಹನ ಚಾಲನಾ ಪರವಾಗಿ ರದ್ದುಗೊಳಿಸುವ ಕೆಲಸವನ್ನೂ ಮಾಡಲಾಗುತ್ತಿದೆ ಎಂದು ಬೆಂಗಳೂರು ಸಂಚಾರ ವಿಭಾಗದ ಜಂಟಿ ಆಯುಕ್ತ ಎಂ.ಎನ್. ಅನುಚೇತ್ ತಿಳಿಸಿದ್ದಾರೆ.

ಹಲ್ಲೆ: ಕ್ರಮಕ್ಕೆ ಮನವಿ

ಬೆಂಗಳೂರು: ಬಿಎಂಟಿಸಿ ಚಾಲಕರ ಮೇಲೆ ಪದೇ ಪದೇ ನಡೆಯುತ್ತಿರುವ ಹಲ್ಲೆ ನಡೆಸುವವರ ವಿರುದ್ಧ ಕೂಡಲೇ ಎಫ್‌ಐಆರ್ ದಾಖಲಿಸುವಂತೆ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡುವಂತೆ ಹಾಗೂ ಚಾಲಕರಿಗೆ ಭದ್ರತೆ ನೀಡುವಂತೆ ಸಾರಿಗೆ ಸಚಿವರು ಹಾಗೂ ಆಯುಕ್ತರಿಗೆ ಚಾಲಕ ಸಂಘಟನೆ ಒಕ್ಕೂಟ ಮನವಿ ಸಲ್ಲಿಸಿದೆ.

ಬೆಂಗಳೂರಿನ ನಾನಾ ಪೊಲೀಸ್ ಠಾಣೆಗಳ ಸರಹದ್ದಿನಲ್ಲಿ ಸುಮಾರು 10,000 ಕ್ಕೂ ಹೆಚ್ಚು ಬಿಎಂಟಿಸಿ ಚಾಲಕರು ಕಾರ್ಯನಿರ್ವಹಿಸುತ್ತಿದ್ದು, ಸಾರಿಗೆಗೆ ಸಂಬಂಧಿಸಿದ ವಾಹನಗಳದ ಆಟೋ ಕ್ಯಾಬ್ ಗೂಡ್ಸ್ ಹಾಗೂ ಶಾಲಾ ವಾಹನಗಳು ಮತ್ತು ಸರಕು ಸಾಗಾಣಿಕೆಯ ವಾಹನಗಳು ಸೇರಿದಂತೆ ಸುಮಾರು ಎಂಟು ಲಕ್ಷ ಖಾಸಗಿ ಚಾಲಕರಿದ್ದು, ಇವರ ಮೇಲೆ ಪದೇ ಪದೇ ಹಲ್ಲೆ ನಡೆಯುತ್ತಿದೆ. ಈ ಸಂಬಂಧ ಸ್ಥಳೀಯ ಠಾಣೆ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸದೆ ನಿರ್ಲಕ್ಷ್ಯ ತೋರುತ್ತಿದ್ದು, ಹಲ್ಲೆ ನಡೆಸುವವರ

ಮೇಲೆ ಎಫ್‌ಐಆರ್ ದಾಖಲಿಸಲು ಪೊಲೀಸ್ ಆಯುಕ್ತರಿಗೆ ಸಾರಿಗೆ ಸಚಿವರು ಸೂಚನೆ ನೀಡಬೇಕು ಎಂದು ಮನವಿ ಮಾಡಿದರು.

ಈ ವೇಳೆ ಇಂಡಿಯನ್ ವೆಹಿಕಲ್ಸ್ ಡ್ರೈವರ್ಸ್ ಟ್ರೇಡ್ ಯೂನಿಯನ್ ಸಂಸ್ಥಾಪಕ ರಾಜ್ಯಾಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ, ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ರಾಜ್ಯಾಧ್ಯಕ್ಷ ಸಂತೋಷ್ ಕುಮಾರ್, ರಾಜ್ಯ ಪ್ರಧಾನ ಕಾರ್ಯದರ್ಶಿ ರಾಜು ಕನ್ನಡಿಗ ಇದ್ದರು.

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್

ನೋಂದಾಯಿತ ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು-562107, ಕರ್ನಾಟಕ, ಭಾರತ
ಕಾರ್ಪೊರೇಟ್ ಕಚೇರಿ: ಬಿಜಿಆರ್‌ಟಿ, 6ನೇ ಮಹಡಿ, ಸರ್ವೆ ನಂ.63/3ಬಿ, ಗೊರ್ವಿಗೆರೆ ಗ್ರಾಮ, ಬಿದರಹಳ್ಳಿ ಹೋಬಳಿ, ವೈಟ್‌ಫೀಲ್ಡ್ ಹೊಸಕೋಟೆ ರಸ್ತೆ, ಬೆಂಗಳೂರು-560115, ಕರ್ನಾಟಕ, ಭಾರತ. **ದೂರವಾಣಿ:** + 91 8067888300; +91 8045540000
ವೆಬ್‌ಸೈಟ್: www.schneiderelectricpresident.com; **ಇ-ಮೇಲ್:** companysecretary@se.com
CIN : L32109KA1984PLC079103

ಸೆಪ್ಟಂಬರ್ 30, 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ಅರ್ಧವಾರ್ಷಿಕ ಮುಕ್ತಾಯದ ಆರ್ಥಿಕ ಫಲಿತಾಂಶಗಳ ಹೇಳಿಕೆಗಳು

(ರೂ.ಗಳು ಮಿಲಿಯನ್ ಗಳಲ್ಲಿ (ಎಂಐಎನ್‌ಆರ್) ಪ್ರತೀ ಷೇರಿನ ಗಳಿಕೆ ದತ್ತಾಂಕ ಹೊರತು ಪಡಿಸಿ)

ವಿವರಗಳು	ತ್ರೈಮಾಸಿಕ ಮುಕ್ತಾಯ			ಅರ್ಧವಾರ್ಷಿಕ ಮುಕ್ತಾಯ		ವಾರ್ಷಿಕ ಮುಕ್ತಾಯ
	30 ಸೆಪ್ಟಂಬರ್ 2024	ಜೂನ್ 30 2024	30 ಸೆಪ್ಟಂಬರ್ 2023	30 ಸೆಪ್ಟಂಬರ್ 2024	30 ಸೆಪ್ಟಂಬರ್ 2023	ಮಾರ್ಚ್ 31 2024
ಕಾರ್ಯಾಚರಣೆಗಳಿಂದ ಬಂದ ವರಮಾನ	1,303.32	1,073.74	896.85	2,377.06	1,943.06	3,929.72
ಅವಧಿಗೆ ನಿವ್ವಳ ಲಾಭ (ತೆರಿಗೆ ಮೊದಲು ಮತ್ತು ಅಸಾಧಾರಣ ವಸ್ತುಗಳು)	138.34	98.41	107.29	236.75	131.51	405.45
ತೆರಿಗೆ ಅವಧಿ ಮೊದಲು ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	104.40	71.96	77.61	176.36	95.34	299.66
ತೆರಿಗೆ ಅವಧಿ ನಂತರ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	104.40	71.96	77.61	176.36	95.34	299.66
ಅವಧಿಯ ಒಟ್ಟು ಸಮಗ್ರ ಆದಾಯ	104.40	71.96	77.61	176.36	95.34	293.61
ಪಾವತಿಸಿದ ಇಕ್ವಿಟಿ ಪಾಲು ಬಂಡವಾಳ (ಮುಖ ಬೆಲೆ ರೂ.10/- ಪ್ರತಿಯೊಂದಕ್ಕೆ)	60.48	60.48	60.48	60.48	60.48	60.48
ಇತರೆ ಇಕ್ವಿಟಿ						1,463.80
ಪ್ರತಿ ಷೇರಿನ ಗಳಿಕೆ (ಇಪಿಎಸ್) (ನೋಟ್ 1 ನ್ನು ಗಮನಿಸಿ)						
ಮೂಲ ಮತ್ತು ದುರ್ಬಲಗೊಳಿಸಿದ ಇಪಿಎಸ್ (ರೂ.10/- ಪ್ರತಿಯೊಂದಕ್ಕೆ)	17.26	11.90	12.83	29.16	15.76	49.55

ಟಿಪ್ಪಣಿ:

1. ಮೇಲಿನ ಆರ್ಥಿಕ ಫಲಿತಾಂಶಗಳನ್ನು ಲೆಕ್ಕಪರಿಶೋಧಕ ಮತ್ತು ಅಪಾಯ ನಿರ್ವಹಣಾ ಸಮಿತಿಯು ಪರಿಶೀಲನೆ ನಡೆಸಿದೆ ಮತ್ತು 11ನೇ ನವೆಂಬರ್ 2024 ರಂದು ನಡೆದ ನಿರ್ದೇಶಕ ಮಂಡಳಿಯ ಸಭೆಯು ಅಂಗೀಕರಿಸಿದೆ. ಮತ್ತು ಮೂಲ ಮತ್ತು ದುರ್ಬಲಗೊಳಿಸಿದ ಪ್ರತೀ ಷೇರಿನ ಗಳಿಕೆಯು ತ್ರೈಮಾಸಿಕ ಮುಕ್ತಾಯವಾದ ಸೆಪ್ಟಂಬರ್ 30, 2024 ಮತ್ತು 30 ಜೂನ್, 2024, 30 ಸೆಪ್ಟಂಬರ್ 2023 ಮತ್ತು ಸೆಪ್ಟಂಬರ್ 30, 2024ಕ್ಕೆ ಮುಕ್ತಾಯಗೊಂಡ ಅರ್ಧವಾರ್ಷಿಕ ಮುಕ್ತಾಯದ ಫಲಿತಾಂಶಗಳು ಈವರೆಗೆ ವಾರ್ಷಿಕವಾಗಿಲ್ಲ.
2. ಕಂಪನಿಯ ಈ ಹಣಕಾಸು ಫಲಿತಾಂಶಗಳು ಭಾರತೀಯ ಲೆಕ್ಕಪತ್ರ ಗುಣಮಟ್ಟಕ್ಕೆ (ಐಎನ್‌ಡಿ ಎಎಸ್) ಅನುಸಾರವಾಗಿ, ಕಾರ್ಪೊರೇಟ್ ಸಚಿವಾಲಯದ ಸೆಕ್ಷನ್ 133ರ ಕಂಪನಿಗಳ ಕಾಯಿದೆ 2013ನ್ನು ಓದಿಕೊಂಡಂತೆ ಜೊತೆಗೆ ನಿಯಮ3 ರ ಕಂಪನಿಗಳ ಕಾಯಿದೆ (ಇಂಡಿಯನ್ ಅಕೌಂಟಿಂಗ್ ಸ್ಟ್ಯಾಂಡರ್ಡ್) ನಿಯಮಗಳು, 2015 ಮತ್ತು ಆ ನಂತರದ ತಿದ್ದುಪಡಿಗಳ ಅನುಸಾರವಾಗಿ ಸಿದ್ಧಪಡಿಸಲಾಗಿದೆ.
3. ಚೀಫ್ ಆಪರೇಟಿಂಗ್ ಡಿಸಿಶನ್ ಮೇಕರ್ "ಸಿಒಡಿಎಂ" ಕಂಪನಿಯ ಸಂಪೂರ್ಣ ಕಾರ್ಯಾಚರಣೆಯನ್ನು ಸಮೀಕ್ಷೆ ನಡೆಸಿದ್ದು, ಅಂದರೆ ಒಂದು ಪ್ರಾಥಮಿಕ ವ್ಯವಹಾರ ಸೆಗ್‌ಮೆಂಟ್ ಅಂದರೆ ಉತ್ಪನ್ನ ಮತ್ತು ವ್ಯವಸ್ಥೆ ವಿದ್ಯುತ್ ವಿತರಣೆಯಲ್ಲಿ . ಆದುದರಿಂದ ಇಂಡ್ ಎಎಸ್ 108 ರ ಪ್ರಕಾರ ಕಾರ್ಯಾಚರಣೆ ವಿಭಾಗದಲ್ಲಿ ಯಾವುದೇ ವರದಿ ಮಾಡುವಂತಹ ವಿಭಾಗಗಳಿಲ್ಲ.
4. ಪ್ರಸ್ತುತ ಅವಧಿಯ ವರ್ಗೀಕರಣಕ್ಕೆ ಅನುಗುಣವಾಗಿ ಹಿಂದಿನ ಅವಧಿಯ ಅಂಕಿಅಂಶಗಳನ್ನು ಅಗತ್ಯವಿದ್ದೆಡೆ ಮರುವರ್ಗೀಕರಣ/ಮರುಗುಂಪು ಮಾಡಲಾಗಿದೆ.
5. ಶಾಸನಬದ್ಧ ಲೆಕ್ಕ ಪರಿಶೋಧಕರು 30 ಸೆಪ್ಟಂಬರ್, 2024ಕ್ಕೆ ಅಂತ್ಯಗೊಂಡ ಅಪರಿಶೋಧಿತ ಆರ್ಥಿಕ ಫಲಿತಾಂಶಗಳನ್ನು ಸೀಮಿತ ವಿಮರ್ಶೆ ನಡೆಸಿರುತ್ತಾರೆ ಮತ್ತು ಮಾರ್ಪಾಡು ಮಾಡಲಾಗದ ವಿಮರ್ಶಾ ವರದಿಯನ್ನು ನೀಡಿರುತ್ತಾರೆ.
6. ಹೇಳಲಾದ ಪರಿಶೋಧಿತ ಹಣಕಾಸು ಫಲಿತಾಂಶಗಳ ಸಂಪೂರ್ಣ ವಿವರವು ಕಂಪನಿಯ ವೆಬ್‌ಸೈಟ್ (**www.schneiderelectricpresident.com**) ಮತ್ತು ಸ್ಟಾಕ್ ಎಕ್ಸ್‌ಚೇಂಜ್ (ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್) ವೆಬ್‌ಸೈಟ್ www.msei.in ನಲ್ಲಿ ಲಭ್ಯವಿದೆ.

ನಿರ್ದೇಶಕರ ಮಂಡಳಿಯ ಪರವಾಗಿ
ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಗಾಗಿ
ಸಹಿ/-
ಅನುಜ್ ಕುಡೇಸಿಯ
ವ್ಯವಸ್ಥಾಪಕ ನಿರ್ದೇಶಕ
ಡಿಐಎನ್: 10629156

ಸ್ಥಳ: ಗುರುಗ್ರಾಮ್
ದಿನಾಂಕ: ನವೆಂಬರ್ 11, 2024

Life Is On | Schneider Electric

ಬಿಎಂಟಿಸಿ ಬಸ್ ಸ್ಫೋಟಕ್ಕೆ ಅತಿದೊಡ್ಡ ಸಂಚು ಹೂಡಿದ್ದ ಶಂಕಿತ ಉಗ್ರರು

ಕೆಫೆ ಬ್ಲಾಸ್ಟ್ ಶಂಕಿತ ಉಗ್ರರಿಗೆ ಐಸಿಸ್ ಲಿಂಕ್

ಬೆಂಗಳೂರು: ರಾಜಧಾನಿಯನ್ನೇ ಬೆಚ್ಚಿಬೀಳಿಸಿದ್ದ ರಾಮೇಶ್ವರಂ ಕೆಫೆ ಸ್ಫೋಟ ಶಂಕಿತರ ಹಿಂದಿನ ರಹಸ್ಯ ಬಗೆದಷ್ಟು ಬಯಲಾಗುತ್ತಿದೆ. ಐಸಿಸ್ ಉಗ್ರರು ಸೂಚನೆಯಂತೆ ಬೆಂಗಳೂರಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿರುವುದು ಬೆಳಕಿಗೆ ಬಂದಿದೆ. ಜತೆಗೆ ಬಿಎಂಟಿಸಿ ಬಸ್ ಸ್ಫೋಟಕ್ಕೆ ಅತಿದೊಡ್ಡ ಸಂಚು ಹೂಡಿದ್ದರು ಎನ್ನುವ ಭಯಾನಕ ಸತ್ಯ ಬಯಲಾಗಿದೆ.

ಶಂಕಿತ ಉಗ್ರರ ಇಂಚಿಂಚೂ ರಹಸ್ಯವನ್ನೂ ಎನ್ಐಎ ಬಯಲಿಗೆಳೆದಿದೆ. ಬಂಧಿತರಾದ ಅಬ್ದುಲ್ ಮತೀನ್ ತಾಹಾ, ಮಾಜ್ ಮುನೀರ್, ಮುಜಾಮೀಲ್ ಷರೀಫ್, ಮೊಹಮದ್ ಶಾರೀಖ್, ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅರಾಫತ್ ಅಲಿ ಐಸಿಸ್ ಜತೆ ಸಂಪರ್ಕದಲ್ಲಿ ಇದ್ದರು ಎನ್ನುವ ಸದ್ಯ ಬಯಲಾಗಿದೆ. ಈ 6 ಶಂಕಿತರಿಗೂ ಐಸಿಸ್ ಪ್ರತ್ಯೇಕ ಟಾಸ್ಕ್ ನೀಡಿತ್ತು.

ಐಸಿಸ್ ಟಾಸ್ಕ್ ಕೊಡುವುದರ ಜತೆಗೆ ಮತ್ತೊಂದು ಕೆಲಸವನ್ನೂ ನೀಡಿತ್ತು. ಯಾವುದೇ ಟಾಸ್ಕ್ ಪೂರ್ಣಗೊಳಿಸಿದರೂ ಅದರ ವಿಡಿಯೋ ಮಾಡಲು ಸೂಚನೆ ನೀಡಲಾಗಿತ್ತು. ಐಸಿಸ್ ಸೂಚನೆ ಮೇರೆಗೆ ವಿಡಿಯೋ ಮಾಡಿರುವ ಸಾಧ್ಯತೆ ಇದೆ. ಈ ಎಲ್ಲಾ ಅಂಶಗಳನ್ನು ಎನ್‌ಐಎ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿ ಕೋರ್ಟ್ ಸಲ್ಲಿಸಿದೆ.

'ಐಸಿಸ್ ಉಗ್ರ' ಟಾಸ್ಕ್: ಅಬ್ದುಲ್ ಮತೀನ್ ತಾಹಾ:

ಅಬ್ದುಲ್ ಮತೀನ್ ತಾಹಗೆ 3 ಬ್ಲಾಸ್ಟ್‌ಗಳ ಜವಾಬ್ದಾರಿ ನೀಡಲಾಗಿತ್ತು. ಈತ ಬೆಂಗಳೂರು ರಾಮೇಶ್ವರಂ ಕೆಫೆ ಬ್ಲಾಸ್ಟ್, ಶಿವಮೊಗ್ಗದಲ್ಲಿ ಟ್ರಯಲ್ ಬ್ಲಾಸ್ಟ್, ಶಿವಮೊಗ್ಗದಲ್ಲಿ ಬೈಕ್‌ಗಳಿಗೆ ಬೆಂಕಿ ಇಟ್ಟಿದ್ದ. ಟೆಕ್ನಿಕಲಿ ಫಾಸ್ಟ್ ಇದ್ದ ಕಾರಣ ಹಣಕಾಸು ವರ್ಗಾವಣೆ ಹೊಣೆಯನ್ನೂ ಐಸಿಸ್ ಈತನಿಗೆ ಕೊಟ್ಟಿತ್ತು.

ಮುಜಾಮಿಲ್ ಶರೀಫ್: ತಾಹ ಮೂಲಕ ಮುಜಾಮಿಲ್ ಶರೀಫ್ ಐಸಿಸ್ ಜತೆ ಸಂಪರ್ಕ ಬೆಳೆಸಿಕೊಂಡಿದ್ದ. ಈತನಿಗೆ ಬೆಂಗಳೂರಿನ ಮೆಜೆಸ್ಟಿಕ್ ಹಾಗೂ ಯಶವಂತಪುರದಲ್ಲಿ ಬಸ್‌ಗಳ ಸ್ಫೋಟದ ಟಾಸ್ಕ್ ಕೊಟ್ಟಿದ್ದರು. ಆದರೆ ಬಸ್ ಬ್ಲಾಸ್ಟ್ ಮಾಡುವಲ್ಲಿ ಮುಜಾಮಿಲ್ ಫೇಲ್ ಆಗಿದ್ದು, ಬಳಿಕ ಶಾಂತಿನಗರದ ಟೈರ್ ಅಂಗಡಿಗೆ ಬೆಂಕಿ ಇಟ್ಟಿದ್ದ.

ಮಾಜ್ ಮುನೀರ್: ತಾಹ ಮೂಲಕ ಈ ಮಾಜ್ ಮುನೀರ್ ಅಲ್ ಹಿಂದ್ ಟ್ರಸ್ಟ್‌ನಲ್ಲಿ ಕೆಲಸ ಮಾಡ್ತಿದ್ದ. ಇದೇ ಟ್ರಸ್ಟ್ ಮೂಲಕ ಭಯೋತ್ಪಾದಕ ಕೃತ್ಯಗಳಿಗೆ ಸ್ಕೆಚ್ ಹಾಕುತ್ತಿದ್ದ. ಶಿವಮೊಗ್ಗದಲ್ಲಿ ಟ್ರಯಲ್ ಬ್ಲಾಸ್ಟ್ ಜತೆಗೆ ಶಿವಮೊಗ್ಗದಲ್ಲಿ ಸರಣಿ ಬೈಕ್‌ಗಳಿಗೆ ಬೆಂಕಿ ಇಡಲು ಈತನೇ ಮೊದಲು ಸಂಚು ಹೂಡಿದ್ದ.

ಮೊಹಮ್ಮದ್ ಶಾರಿಕ್: ಮೊಹಮ್ಮದ್ ಶಾರಿಕ್ ಶಿವಮೊಗ್ಗದಲ್ಲಿ ಟ್ರಯಲ್ ಬ್ಲಾಸ್ಟ್ ಟಾಸ್ಕ್ ಕೊಟ್ಟಿದ್ದರು. ಶಿವಮೊಗ್ಗದಲ್ಲಿ ಬೈಕ್‌ಗಳಿಗೆ ಬೆಂಕಿ ಇಡುವುದರ ಜತೆಗೆ ಮಂಗಳೂರಲ್ಲಿ ಕುಕ್ಕರ್ ಬ್ಲಾಸ್ಟ್ ಜವಾಬ್ದಾರಿ ಕೊಟ್ಟಿತ್ತು ಐಸಿಸ್.

ಮುಸಾವಿರ್ ಹುಸೇನ್ ಶಾಜಿಬ್: ಶಾರಿಕ್ ಜತೆಗೂಡಿ ಮುಸಾವಿರ್ ಹುಸೇನ್ ಶಾಜಿಬ್ ವಿಧ್ವಂಸಕ ಕೃತ್ಯ ನಡೆಸುವಂತೆ ಐಸಿಸ್ ಡೈರೆಕ್ಷನ್ ನೀಡಿತ್ತು. ಮಂಗಳೂರಲ್ಲಿ ಕುಕ್ಕರ್ ಬ್ಲಾಸ್ಟ್, ಬೆಂಗಳೂರಿನ ರಾಮೇಶ್ವರಂ ಕೆಫೆ ಬ್ಲಾಸ್ಟ್ ಹಾಗೂ ಆರ್‌ಟಿಒ ಕಚೇರಿ ಬಳಿ ಬಾಂಬಿಟ್ಟಿದ್ದ ಈ ಮುಸಾವಿರ್.

ಅರಾಫತ್ ಅಲಿ: ಈ ಎಲ್ಲರಿಗೂ ಹಣಕಾಸು ಸಹಾಯ ಒದಗಿಸುವ ಹೊಣೆಯನ್ನು ಅರಾಫತ್ ಅಲಿ ಕೊಟ್ಟಿದ್ದರು. ತಾಹ ಹೇಳಿದಂತೆ ಹಣದ ಸಹಾಯ ಮಾಡುತ್ತಿದ್ದ ಈತ, ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧನವಾಗಿದ್ದ.

ಸಹಕಾರ ಇಲಾಖೆ
ಸಹಕಾರ ಸಂಘಗಳ ಉಪ ನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದವಾ ಪಂಚಾಯಿತಿ ನ್ಯಾಯಾಲಯ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು, #62, 2ನೇ ಮಹಡಿ, ಮಾರ್ಗೋಸಾ ರಸ್ತೆ (3ನೇ ಮುಖ್ಯ ರಸ್ತೆ) 18ನೇ ಕ್ರಾಸ್, ಪೈಪ್‌ಲೈನ್, ಮಲ್ಲೇಶ್ವರಂ, ಬೆಂಗಳೂರು-560055

ವಾದಿ: ಮುಖ್ಯಕಾರ್ಯನಿರ್ವಾಹಕರು
M/s V Gold Souharda Co-operative Limited, Office at #128, 1st floor, Bazaar Street, Halasuru, Bangalore-560008, Represented by its Liquidator
ಪ್ರತಿವಾದಿ: ವ್ಯಾಜ್ಯ ಸಂಖ್ಯೆ : ಜೆ.ಆರ್.ಡಿ/ ಕ.ರಾ.ಸೌ.ಸಂ.ಸ.ನಿ/ 1321/2022-23 1(a) Smt. Hemalatha (Wife of Respondent) W/o R.S. Prakash, Age 52 years, R/at #3-5, 3rd cross, Lingaiahnapalya, Halasuru, Bangalore-560008.

ಪ್ರತಿವಾದಿಗಳಿಗೆ ಪತ್ರಿಕಾ ಪ್ರಕಟಣೆ ಮೂಲಕ ನೋಟೀಸ್

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ಪ್ರತಿವಾದಿಗಳ ದಾವಾ ಸಂಖ್ಯೆ ಡಿ.ಆರ್.ಡಿ/ಕ.ರಾ.ಸೌ.ಸಂ.ಸ.ನಿ/1321/ 2022-23, ರಂತೆ ಸಹಕಾರ ಸಂಘಗಳ ಉಪನಿಬಂಧಕರು (ನಿ.441), ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಲಯದಲ್ಲಿ ದಾವೆಯನ್ನು ಸಲ್ಲಿಸಿದ್ದು, ನೀವು ಪ್ರತಿವಾದಿಯಾಗಿರುತ್ತೀರಿ. ಆದುದರಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ಈ ಮೇಲ್ಕಂಡ ನ್ಯಾಯಾಲಯದ ಮುಂದೆ ದಿನಾಂಕ: **19-11-2024** ರಂದು ಬೆಳಗ್ಗೆ **11.30** ಗಂಟೆಗೆ ಸರಿಯಾಗಿ ತಾವಾಗಲೀ, ತಮ್ಮಿಂದ ನೇಮಕಗೊಂಡ ವಕೀಲರ ಮುಖಾಂತರ ವಾಗಲೀ ಹಾಜರಾಗಲು ಈ ಮೂಲಕ ತಿಳಿಯಪಡಿಸುತ್ತೇವೆ. ತಪ್ಪಿದ್ದಲ್ಲಿ ನಿಮ್ಮಗೈರು ಹಾಜರಿಯಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ಇತ್ಯರ್ಥಪಡಿಸಲಾಗುವುದು. ಸದರಿ ಪ್ರಕರಣವನ್ನು ದಿನಾಂಕ **24-10-2024** ರಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/- ಸಹಕಾರ ಸಂಘಗಳ ಉಪನಿಬಂಧಕರು (ನಿ.441) ದವಾ ಪಂಚಾಯ್ತಿ ನ್ಯಾಯಾಲಯ ಕ.ರಾ.ಸೌ.ಸಂ.ಸ.ನಿ. ಬೆಂಗಳೂರು (ನ್ಯಾಯಾಲಯದ ಆದೇಶದ ಮೇರೆಗೆ)

ದುನಿಯಾ ವಿಜಯ್ ಜೈಲಿಂದ ಬಿಡಿಸಿದ್ದ ಆರೋಪಿಯಿಂದ ಡಬಲ್ ಮರ್ಡರ್

ಬೆಂಗಳೂರು: ನಗರದ ಹೊರವಲಯದಲ್ಲಿ ನಡೆದಿದ್ದ ಜೋಡಿ ಕೊಲೆ ಪ್ರಕರಣಕ್ಕೆ ತಿರುವು ಸಿಕ್ಕಿದೆ. ಡಬಲ್ ಮರ್ಡರ್ ಮಾಡಿರುವ



ಆರೋಪಿಯನ್ನು ಈ ಹಿಂದೆ ಪ್ರಕರಣವೊಂದರಲ್ಲಿ ಸ್ಯಾಂಡಲ್‌ವುಡ್ ನಟ ದುನಿಯಾ ವಿಜಯ್ ಜೈಲಿಂದ ಬಿಡಿಸಿದ್ದರು ಎಂಬ ಮಾಹಿತಿ ಹೊರಬಿದ್ದಿದೆ. ಆದರೆ, ದುನಿಯಾ ವಿಜಿ ಅವರ ಆಶಯವನ್ನು ಕೊಲೆ ಪಾತಕಿ ವ್ಯರ್ಥ ಮಾಡಿದ್ದಾನೆ.

ಬಾಗಲೂರು ಡಬಲ್ ಮರ್ಡರ್ ಆರೋಪಿ ಸುರೇಶ್‌ಗೆ ಈ ಹಿಂದೆ ಪ್ರಕರಣವೊಂದರಲ್ಲಿ ಶ್ಯೂರಿಟಿ ಹಣ ನೀಡಿ ದುನಿಯಾ ವಿಜಯ್ ಬಿಡಿಸಿದ್ದರು. ಈ ಹಿಂದೆ ಡಬಲ್ ಮರ್ಡರ್ ಪ್ರಕರಣ ಹಾಗೂ ಅತ್ಯಾಚಾರ ಪ್ರಕರಣದಲ್ಲಿ ಆರೋಪಿ ಸುರೇಶ್ ಜೈಲು ಸೇರಿದ್ದ. 10 ವರ್ಷ ಶಿಕ್ಷೆ ಅನುಭವಿಸಿದ್ದ ಅಪರಾಧಿಗೆ ಶ್ಯೂರಿಟಿ ಹಣ ನೀಡಲು ಯಾರೂ ಇರಲಿಲ್ಲ. ಈ ಸಮಯದಲ್ಲಿ ಒಂದಷ್ಟು ಅಪರಾಧಿಗಳಿಗೆ ತಲಾ ಮೂರು ಲಕ್ಷದಂತೆ ಶ್ಯೂರಿಟಿ ಹಣವನ್ನು ನಟ ವಿಜಯ್ ಕಟ್ಟಿದ್ದರು. ಈ ವೇಳೆ ಸುರೇಶ್‌ಗೂ ಕೂಡ ಮೂರು ಲಕ್ಷ ಶ್ಯೂರಿಟಿ ಹಣ ನೀಡಿ ಜೈಲಿಂದ ಬಿಡುಗಡೆಗೊಳಿಸಿದ್ದರು.

ಜೈಲಿಂದ ಬಿಡುಗಡೆ ಬಳಿಕ ಮಾರ್ಕೆಟ್‌ನಲ್ಲಿ ಕೊತ್ತಂಬರಿ ಸೊಪ್ಪು ಮಾರಾಟ ಮಾಡಿ ಸುರೇಶ್ ಜೀವನ ಸಾಗಿಸುತ್ತಿದ್ದ. ಸುರೇಶ್ ಸಂಬಂಧಿಯಿಂದ ಶೆಡ್‌ನಲ್ಲಿ ಕೆಲಸ ಪಡೆದುಕೊಂಡಿದ್ದ. ಗುಜರಿ ಮಾರುವ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದ. ಕೊಲೆಯಾದ ನಾಗೇಶ್ ಮತ್ತು ಮಂಜುನಾಥ್, ನೀನು ಕಳ್ಳ, ಕೊಲೆಗಾರ ಅಂತಾ ಹೀಯಾಳಿಸಿದ್ದರು. ಹೀಗಾಗಿ, ಈಚೆಗೆ ಇಬ್ಬರನ್ನೂ ಆರೋಪಿ ಸುರೇಶ್ ಕೊಲೆ ಮಾಡಿದ್ದ. ಈಗ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ತಪ್ಪು ಮಾಡದಂತೆ ಉಪದೇಶ

ದುನಿಯಾ ವಿಜಯ್ ಅವರು ಜೈಲಿನಿಂದ ಬಿಡಿಸಿದ ಎಲ್ಲರಿಗೂ ಅವರು ಜೈಲಿನಿಂದ ಹೊರಗೆ ಬಂದಾಗ ಹೇಳುತ್ತಿದ್ದ ಮಾತು, ಮತ್ತೆ ತಪ್ಪು ಮಾಡಬೇಡಿ. ಒಳ್ಳೆಯ ಜೀವನ ಕಟ್ಟಿಕೊಳ್ಳಿ, ಒಳ್ಳೆಯದಾಗಲಿ ಎಂದು ಹೇಳುತ್ತಿದ್ದರು ಆದರೆ, ಈ ಆರೋಪಿ ಅವರ ಒಳ್ಳೆಯ ಆಲೋಚನೆಗೆ ಕಪ್ಪು ಮಸಿ ಬಳಿದಂತೆ ಮಾಡಿದ್ದಾನೆ.

- **ನಟ ದುನಿಯಾ ವಿಜಯ್ ಆರೋಪಿಗೆ ಶ್ಯೂರಿಟಿ ಹಣ ನೀಡಿ ಬಿಡುಗಡೆಗೊಳಿಸಿದ್ದರು.**
- **ಹಿಂದೆ ಡಬಲ್ ಮರ್ಡರ್, ಅತ್ಯಾಚಾರ ಪ್ರಕರಣದಲ್ಲಿ 10 ವರ್ಷ ಶಿಕ್ಷೆ ಅನುಭವಿಸಿದ್ದ**

ಪಾರ್ಕಿಂಗ್ ಸಮಸ್ಯೆಗೆ ಪರಿಹಾರ ಕ್ರಮಕ್ಕೆ ಮೆಟ್ರೋ ಸಿದ್ಧತೆ

ಈಗಾಗಲೇ ಹಲವು ಕಡೆಗಳಲ್ಲಿ ಸೈಕಲ್ ಸ್ಟ್ಯಾಂಡ್‌ಗಳ ವ್ಯವಸ್ಥೆ | ಹೆಚ್ಚು-ಹೆಚ್ಚು ಸೈಕಲ್ ಬಳಕೆಗೆ ಉತ್ತೇಜನ

ಬೆಂಗಳೂರು: ನಗರದಲ್ಲಿ ನಮ್ಮ ಮೆಟ್ರೋ ಜಾಲವು ವಿಸ್ತರಣೆಯಾಗುತ್ತಿದ್ದಂತೆಯೇ ಪಾರ್ಕಿಂಗ್‌ನದ್ದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದು, ಇದಕ್ಕೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಮೆಟ್ರೋ ಮುಂದಾಗಿದೆ.

ನಮ್ಮ ಮೆಟ್ರೋದಲ್ಲಿ ಆಗಮಿಸುವ ಹಲವಾರು ಪ್ರಯಾಣಿಕರು ಸೈಕಲ್‌ನ ಬಳಕೆ ಮಾಡುತ್ತಿದ್ದು, ಈಗಾಗಲೇ ಹಲವು ಕಡೆಗಳಲ್ಲಿ ಸೈಕಲ್ ಸ್ಟ್ಯಾಂಡ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಸದ್ಯ ಪಾರ್ಕಿಂಗ್ ಸಮಸ್ಯೆಯ ನಿವಾರಣೆಗಾಗಿ ಡಲ್ಟ್ ಹಾಗೂ ಬಿಎಂಆರ್‌ಸಿಎಲ್ ಹೊಸದೊಂದು ಸಮೀಕ್ಷೆಯನ್ನು ನಡೆಸಲು ಮುಂದಾಗಿದ್ದು, ಸೈಕಲ್ ಸ್ಟಾಂಡ್ ಇರುವ 10 ಮೆಟ್ರೋ ನಿಲ್ದಾಣಗಳಲ್ಲಿ ಹೆಚ್ಚು ಸೈಕಲ್ ನಿಲ್ಲಿಸಲು ಅನುಕೂಲವಾಗುವಂತೆ ಹೆಚ್ಚುವರಿ ಸೌಲಭ್ಯ ಕಲ್ಪಿಸುವ ಕುರಿತು ಅಧ್ಯಯನ ಆರಂಭಿಸಿವೆ. ಈ ಹಿಂದೆ ನಗರ ಭೂಸಾರಿಗೆ ನಿರ್ದೇಶನಾಲಯವು, ಬಿಎಂಆರ್‌ಸಿಎಲ್ ಜತೆ ಸೇರಿ ಸೈಕಲ್ ಸ್ಟಾಂಡ್ ವಿನ್ಯಾಸ ಸೇರಿದಂತೆ ಹಲವು ಕೆಲಸಗಳನ್ನು ಪ್ರಾಯೋಗಿಕವಾಗಿ ಕೈಗೊಂಡಿತ್ತು.

ಹೆಚ್ಚು-ಹೆಚ್ಚು ಸೈಕಲ್ ಬಳಕೆಗೆ ಉತ್ತೇಜನ

ಈಗ ನಮ್ಮ ಮೆಟ್ರೋ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದ್ದು, ಅದಕ್ಕೆ ತಕ್ಕಂತೆ ಮೆಟ್ರೋ ಪ್ರಯಾಣಿಕರು ಬೈಸಿಕಲ್ ಬೇಡಿಕೆಯೂ ಹೆಚ್ಚಳವಾಗಿದೆ. ಆದ್ದರಿಂದ 10 ಮೆಟ್ರೋ ನಿಲ್ದಾಣಗಳಲ್ಲಿ ಹೆಚ್ಚುವರಿ ಸೈಕಲ್ ನಿಲುಗಡೆ ವ್ಯವಸ್ಥೆ ಮಾಡುವ ಕುರಿತು ಅಧ್ಯಯನ ಆರಂಭಿಸಲಾಗಿದೆ. ಹಾಗೂ ಹೊಸದಾಗಿ ಕೆಂಗೇರಿ ಬಸ್ ಟರ್ಮಿನಲ್, ಕೆಆರ್ ಪುರ, ಮಾದಾವರ, ಚಿಕ್ಕಬಿದರಕಲ್ಲು, ಮಂಜುನಾಥ ನಗರ, ದಾಸರಹಳ್ಳಿ, ನ್ಯಾಷನಲ್ ಕಾಲೇಜು, ಬನಶಂಕರಿ, ಜೆಪಿ ನಗರ, ರೇಷ್ಮೆ ಸಂಸ್ಥೆ ನಿಲ್ದಾಣಗಳಲ್ಲಿ ಸೈಕಲ್ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲು ವರದಿ ತಯಾರು ಮಾಡಲಾಗುತ್ತದೆ.

10 ನಿಲ್ದಾಣಗಳಲ್ಲಿ ಅಧ್ಯಯನ

ಜೂನ್ 2024ರಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯವು 10 ಮೆಟ್ರೋ ನಿಲ್ದಾಣದಲ್ಲಿ ಸೈಕಲ್ ಪಾರ್ಕಿಂಗ್ ವ್ಯವಸ್ಥೆ ಮಾಡುವ ಕುರಿತು ಅಧ್ಯಯನವೊಂದನ್ನು ನಡೆಸಿತ್ತು. ಇದರಲ್ಲಿ ನಾಗಸಂದ್ರ, ಪೀಣ್ಯ, ಮಹಾಲಕ್ಷ್ಮಿ, ರಾಜಾಜಿನಗರ, ಮಹಾಕವಿ ಕುವೆಂಪು ರಸ್ತೆ, ಜಯನಗರ, ಯೆಲಚೇನಹಳ್ಳಿ, ಕೋಣನಕುಂಟೆ ಕ್ರಾಸ್, ಸ್ವಾಮಿ ವಿವೇಕಾನಂದ ರಸ್ತೆ, ಬೈಯಪ್ಪನಹಳ್ಳಿ ನಿಲ್ದಾಣಗಳು ಸೇರಿದ್ದವು.

ಸೈಕಲ್ ಪಾರ್ಕಿಂಗ್‌ಗೆ ಹೆಚ್ಚು ಬೇಡಿಕೆ

ಅಧ್ಯಯನದ ಮಾಹಿತಿ ಪ್ರಕಾರ, ಯಲಚೇನಹಳ್ಳಿ, ಕೋಣನಕುಂಟೆ ಕ್ರಾಸ್, ಸ್ವಾಮಿ ವಿವೇಕಾನಂದ ನಿಲ್ದಾಣಗಳಲ್ಲಿ ವಾರದ ದಿನಗಳಲ್ಲಿ ಹೆಚ್ಚು ಸೈಕಲ್ ಆಗಮಿಸುತ್ತಿದ್ದು, ಕೆಲ ದಿನಗಳಲ್ಲಿ ಈ ಸಂಖ್ಯೆ 113ಕ್ಕೆ ಸಹ ತಲುಪಿದೆ. ರಾಜಾಜಿನಗರ, ಮಹಾಲಕ್ಷ್ಮೀ ಮತ್ತು ಪೀಣ್ಯ ನಿಲ್ದಾಣಗಳಲ್ಲಿ ಸೈಕಲ್ ಬಳಕೆ ಮಾಡುವವರ ಸಂಖ್ಯೆ ಕಡಿಮೆಯಾಗಿದೆ. ಹೆಚ್ಚು ಪ್ರಯಾಣಿಕರು ಭೇಟಿ ನೀಡುವ ನಿಲ್ದಾಣಗಳಲ್ಲಿ ಸೈಕಲ್ ಪಾರ್ಕಿಂಗ್‌ಗೆ ಹೆಚ್ಚು ಬೇಡಿಕೆ ಇದೆ. ಪಾವತಿ ಪಾರ್ಕಿಂಗ್ ವ್ಯವಸ್ಥೆ ಇರುವಲ್ಲಿಯೇ ಸೈಕಲ್ ನಿಲ್ಲಿಸಲು ಪ್ರಯಾಣಿಕರು ಬಯಸುತ್ತಿದ್ದಾರೆ. ಅಲ್ಲಿ ಕಣ್ಗಾವಲು ವ್ಯವಸ್ಥೆಯೂ ಇರುವ ಕಾರಣ ಸೈಕಲ್ ಸುರಕ್ಷಿತವಾಗಿರಲಿದೆ.

ನಮ್ಮ ಮೆಟ್ರೋ ನಿಲ್ದಾಣಕ್ಕೆ ಭೇಟಿ ನೀಡುವ ಪ್ರಯಾಣಿಕರ ಸಂಖ್ಯೆ, ಜಾಗದ ಲಭ್ಯತೆ ಮುಂತಾದ ಅಂಶಗಳ ಆಧಾರದ ಮೇಲೆ ಮೆಟ್ರೋ ನಿಲ್ದಾಣಗಳನ್ನು ಅಂತಿಮಗೊಳಿಸಲಾಗಿದೆ. ಪ್ರಾಯೋಗಿಕವಾಗಿ ಈಗಾಗಲೇ ಹಲವು ಮೆಟ್ರೋ ನಿಲ್ದಾಣಗಳಲ್ಲಿ ಸೈಕಲ್ ಸ್ಟಾಂಡ್ ಯೋಜನೆ ಕಾರ್ಯಗತಗೊಳಿಸಲಾಗಿದೆ. ಬೈಕ್ ಮತ್ತು ಕಾರು ಪಾರ್ಕಿಂಗ್ ಮಾದರಿಯಲ್ಲಿಯೇ ಸೈಕಲ್ ಪಾರ್ಕಿಂಗ್‌ಗೂ ಆದ್ಯತೆ ನೀಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

25,720 ಸಸಿ ನೆಟ್ಟ ಬಿಎಂಆರ್‌ಸಿಎಲ್

ನಮ್ಮ ಮೆಟ್ರೋದಿಂದ ಅರಣ್ಯೀಕರಣ

ಬೆಂಗಳೂರು: ನಮ್ಮ ಮೆಟ್ರೋವು ಕಾಮಗಾರಿಗಾಗಿ ಸಾವಿರಾರು ಮರಗಳನ್ನು ಕಡಿಯಬೇಕಾಗಿದ್ದರಿಂದ ಪರಿಹಾರವಾಗಿ ಅರಣ್ಯೀಕರಣಕ್ಕೆ ಮುಂದಾಗಿದ್ದು, 25,720 ಸಸಿಗಳನ್ನು ನೆಟ್ಟಿದೆ.

ಬಿಬಿಎಂಪಿಯ ಅರಣ್ಯ ವಿಭಾಗದ ಪ್ರಕಾರ, ಬೆಂಗಳೂರು ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಮೆಟ್ರೋ ಸಂಪರ್ಕ ಕಲ್ಪಿಸುವ ಸಲುವಾಗಿ ನಮ್ಮ ಮೆಟ್ರೋವು ಸಾವಿರಾರು ಮರಗಳನ್ನು ಕಡಿಯಬೇಕಾಗಿ ಬಂದ ಪರಿಣಾಮವಾಗಿ ಅದಕ್ಕೆ ಪರಿಹಾರಾರ್ಥವಾಗಿ ಅರಣೀಕರಣಕ್ಕೆ ಮುಂದಾಗಿದೆ ಎಂದು ಹೇಳಿದೆ.

ಇಬ್ಲೂರು, ಸಿಎಂಪಿ (ತರಬೇತಿ ಪ್ರದೇಶ) ನೀಲಸಂದ್ರ, ನಾಡಪ್ರಭು ಕೆಂಪೇಗೌಡ ಬಡಾವಣೆ, ಹಳೆ ಮಿಲಿಟರಿ ಡೈರಿ ಫಾರಂ, ಹೆಬ್ಬಾಳ ಮತ್ತು ಯುವ ತರಬೇತಿ ಕೇಂದ್ರ, ಜೆ.ಪಿ. ನಗರದಂತಹ ಸ್ಥಳಗಳಲ್ಲಿ 17,690 ಸಸಿಗಳನ್ನು ನೆಡಲಾಗಿದೆ. ಅದೇ ರೀತಿ ಹಂತ-2ಎ ಅಡಿಯಲ್ಲಿ ಈ ಪ್ರದೇಶಗಳಲ್ಲಿ 8030 ಸಸಿಗಳನ್ನು ನೆಡಲಾಗಿದೆ. ಸಿ.ಎ. ಘಟಕ ಅಡಿಯಲ್ಲಿ 40,050 ಹೆಚ್ಚು ಸಸಿಗಳನ್ನು ನೆಡಲಾಗುವುದು ಮತ್ತು ಈಗ ಬಿಎಂಆರ್‌ಸಿಎಲ್ ಬದಲಾಗಿ ಅರಣ್ಯ ಇಲಾಖೆ ಈ ಕೆಲಸ ಮಾಡಲಿದೆ.

ನಮ್ಮ ಮೆಟ್ರೋದ ಹಣಕಾಸು ವಿಭಾಗವು ಸಿಎ ಮತ್ತು ಅದರ ನಿರ್ವಹಣೆಗೆ ಅಗತ್ಯವಾದ ಮೊತ್ತವನ್ನು ಮೂರು ವರ್ಷಗಳ ಕಾಲ ಅರಣ್ಯ ಇಲಾಖೆಗೆ ವರ್ಗಾಯಿಸುತ್ತದೆ. ಸಸ್ಯಗಳ ನಿರ್ವಹಣೆಗೆ ಮೀಸಲಾದ ತಂಡವನ್ನು ಹೊಂದಿರುವ ಕಾರಣ ಮೊತ್ತವನ್ನು ಅರಣ್ಯ ಇಲಾಖೆ ವರ್ಗಾಯಿಸಲಾಗುವುದು, 2024ರ ಡಿಸೆಂಬರ್‌ನಲ್ಲಿ ಪತ್ರವ್ಯವಹಾರ ಮತ್ತು ಇತರೆ ದಾಖಲೆಗಳನ್ನು ಮಾಡಲಾಗುತ್ತದೆ ಹಾಗೂ ಸಿಎ ಸೇರಿದಂತೆ ಮುಂದಿನ ಮಳೆಗಾಲದಲ್ಲಿ ದೊಡ್ಡ ಪ್ರಮಾಣದ ಸಸಿಗಳನ್ನು ನೆಡುವ ಅಭಿಯಾನವನ್ನು ಕೈಗೊಳ್ಳಲಾಗುವುದು ಎಂದು ನಮ್ಮ ಮೆಟ್ರೋದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ವರ್ಷದ ಅವಧಿಯಲ್ಲಿ ಸಸಿ ನಾಟಿ

ನಗರದಾದ್ಯಂತ ವಿವಿಧ ಕಡೆಗಳಲ್ಲಿ ಸ್ಥಳಗಳನ್ನು ಗುರುತಿಸಲಾಗಿದ್ದು ಮೂರು ವಿಭಿನ್ನ ಹಂತಗಳಲ್ಲಿ, ಸ್ಥಳೀಯ ಮತ್ತು ಹವಾಮಾನವನ್ನು ತಡೆದುಕೊಳ್ಳುವ ಮರಗಳನ್ನು ನೆಡಲಾಗಿದ್ದು, ಕಾಮಗಾರಿಯ ಮೇಲ್ವಿಚಾರಣೆಯನ್ನು ನಡೆಸಲಾಗಿದೆ. ಈ ಯೋಜನೆಯನ್ನು ಜೂನ್ 2023ರಲ್ಲಿ ಪ್ರಾರಂಭಿಸಿದ್ದು, 2023ರ ಸೆಪ್ಟೆಂಬರ್‌ವರೆಗೆ 25,000ಕ್ಕೂ ಅಧಿಕ ಗಿಡಗಳನ್ನು ನೆಡಲಾಗಿದೆ. ಈ ಗಿಡಗಳು ಉತ್ತಮವಾಗಿ ಬೆಳೆದಿದ್ದು ನಮ್ಮ ಮೆಟ್ರೋ ಇನ್ನೂ ಎರಡು ವರ್ಷಗಳ ಕಾಲ ಮಾತ್ರ ನಿರ್ವಹಿಸಲಿದೆ ಎಂದು ಹೇಳಿದೆ.

ಸಮಾಚಾರ ಸಣ್ಣದಲ್ಲ

ಹಿರಿಯ ಪತ್ರಕರ್ತ ಅಶ್ವತ್ಥ ನಾರಾಯಣ ಇನ್ನಿಲ್ಲ

ಬೆಂಗಳೂರು: ದಶಕಗಳ ಕನ್ನಡ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದ ಹಿರಿಯ ಪತ್ರಕರ್ತ ಟಿ.ಜಿ. ಅಶ್ವತ್ಥನಾರಾಯಣ ಸೋಮವಾರ ಸಂಜೆ ಕೊನೆಯುಸಿರು ಎಳೆದಿದ್ದಾರೆ.

ಪತ್ರಿಕೋದ್ಯಮದ ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತ ಜೀವನ ಸಾಗಿಸುತ್ತಿದ್ದ ಟಿ.ಜಿ.ಅಶ್ವಥನಾರಾಯಣ (82) ಅವರು ಸೋಮವಾರ ಸಾಯಂಕಾಲ ವಯೋಸಹಜ ಅನಾರೋಗ್ಯದಿಂದ ನಿಧನರಾಗಿದ್ದಾರೆ. ವಿಲ್ಸನ್ ಗಾರ್ಡನ್ ಶವಾಗಾರದಲ್ಲಿ ಮಂಗಳವಾರ ಬೆಳಗ್ಗೆ ಹನ್ನೊಂದು ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ. ಕನ್ನಡಪ್ರಭದಲ್ಲಿ ವಿವಿಧ ಹುದ್ದೆ ಅಲಂಕರಿಸಿ ಸುದ್ದಿ ಸಂಪಾದಕರಾಗಿ ಬಳಿಕ ದೆಹಲಿ ವರದಿಗಾರರಾಗಿ ನಿವೃತ್ತಿ ಹೊಂದಿದ್ದರು. ಇದರೊಂದಿಗೆ ಮೇನಕ ಎನ್ನುವ ಪತ್ರಿಕೆಗೆ ಸಿನಿಮಾ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದರು. ಕೇವಲ ಇದಿಷ್ಟೇ ಅಲ್ಲದೆ ಕನ್ನಡದ ಪ್ರಖ್ಯಾತ ನಿರ್ದೇಶಕ ಪುಟ್ಟಣ್ಣ ಕಣಗಾಲ್ ಅವರೊಂದಿಗೆ ಕೆಲ ಚಿತ್ರಗಳಿಗೆ ಕೆಲಸ ಮಾಡಿದ್ದರು. ಇನ್ನು ಹಲವು ಕಿರುತರೆ ಧಾರವಾಹಿಗಳಿಗೆ ನಿರ್ದೇಶಕ, ಸಂಭಾಷಣೆಯನ್ನೂ ಬರೆದಿದ್ದರು. ಹಿರಿಯ ನಿಧನಕ್ಕೆ ವಿವಿಧ ಕ್ಷೇತ್ರದ ಗಣ್ಯರು, ಪತ್ರಿಕೋದ್ಯಮದ ಒಡನಾಡಿಗಳು ಸೇರಿದಂತೆ ಅನೇಕರು ಕಂಬನಿ ಮಿಡಿದಿದ್ದಾರೆ.

ಇಂದು ಅನಂತ ಸ್ಮೃತಿ ನಡಿಗೆ ಪಂಜಿನ ಮೆರವಣಿಗೆ

ಬೆಂಗಳೂರು: ನಾಡಿನ ಧೀಮಂತ ಜನನಾಯಕ ಅನಂತಕುಮಾರ್ ಅವರ ಪುಣ್ಯಸ್ಮರಣೆಯ ನಿಮಿತ್ತ ನ.12ರಂದು ಸಂಜೆ 5 ಗಂಟೆಗೆ ಅನಂತಕುಮಾರ

ಪ್ರತಿಷ್ಠಾನ ಹಾಗೂ ಅದಮ್ಯ ಚೇತನದ ವತಿಯಿಂದ ಅನಂತ ಸ್ಮೃತಿ ನಡಿಗೆ ಪಂಜಿನ ಮೆರವಣಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಸೌತ್ ಎಂಡ್ ವೃತ್ತದಲ್ಲಿರುವ ಅನಂತಕುಮಾರ್ ಪ್ರೇರಣಾ ಕೇಂದ್ರದಿಂದ ಅನಂತ್ ಸ್ಮೃತಿ ವನ - ಲಾಲ್ ಬಾಗ್ ಪಶ್ಚಿಮ ದ್ವಾರ, ಗಾಂಧಿ ಬಜಾರ್, ನಾಗಸಂದ್ರ ವೃತ್ತ, ವಿಜಯಾ ಹೈಸ್ಕೂಲ್ ಮತ್ತು ಪ್ರೇರಣಾ ಕೇಂದ್ರದ ಮಾರ್ಗದಲ್ಲಿ ಪಂಜಿನ ಮೆರವಣಿಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಬಿಜೆಪಿ ಹಿರಿಯ ನಾಯಕರು, ಪ್ರತಿಪಕ್ಷ ನಾಯಕರು ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ ಎಂದು ಅದಮ್ಯ ಚೇತನ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ನೀರು ಸರಬರಾಜಿನಲ್ಲಿ ವ್ಯತ್ಯಯ 14ರಂದು

ಬೆಂಗಳೂರು: ಬೆಂಗಳೂರು ಜಲಮಂಡಳಿ ವತಿಯಿಂದ ತುರ್ತು ದುರಸ್ಥಿ ಕಾಮಗಾರಿ ಹಿನ್ನೆಲೆ ನ.14ರಂದು ಬೆಳಗ್ಗೆ 10.30ರಿಂದ 12.30 ಗಂಟೆಯವರೆಗೆ 2ಗಂಟೆ ನೀರಿನ ಸರಬರಾಜಿನಲ್ಲಿ

ವ್ಯತ್ಯಯವಾಗಲಿದೆ ಎಂದು ಮಂಡಳಿ ತಿಳಿಸಿದೆ. ನಗರದ ವೃಷಭಾವತಿ ವಿದ್ಯುತ್ ಸ್ಥಾವರದಿಂದ ತಾತಗುಣಿ ವಿದ್ಯುತ್ ಸ್ಥಾವರದ 220 ಕೆವಿ ವಿದ್ಯುತ್ ಮಾರ್ಗದಲ್ಲಿ ಹಲವು ಪರಿಕರಗಳನ್ನು ತುರ್ತಾಗಿ ಬದಲಾಯಿಸುವ ಹಾಗೂ ಕಾವೇರಿ ನೀರು ಸರಬರಾಜು ಯೋಜನೆಯ ಎಲ್ಲಾ ಹಂತಗಳ ಜಲರೇಚಕ ಯಂತ್ರಾಗಾರಗಳಲ್ಲಿ ಅಳವಡಿಸಲಾಗುತ್ತಿದ್ದು, ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಮಂಡಳಿ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಸ್ಕಾಂ ವತಿಯಿಂದ ನಗರದ 66/11ಕೆ.ವಿ ಹೆಣ್ಣೂರು ರೋಡ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯವಿರುವುದರಿಂದ ನ.13ರಂದು ಬೆ. 10.30ರಿಂದ 3.30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ತಿಳಿಸಿದೆ. ನಗರದ ಹೆಣ್ಣೂರು ಬಂಡೆ, ಸಮುದ್ರಿಕಾ ಎನ್

ಕ್ಲೇವ್, ಗ್ರೇಸ್ ಗಾರ್ಡನ್, ಕ್ರಿಸ್ತು ಜಯಂತಿ ಕಾಲೇಜ್, ಕೆ.ನಾರಾಯಣಪುರ, ಬಿಳಿಶಿವಾಲೆ, ಆಶಾ ಟೌನ್‌ಶಿಪ್, ಐಶ್ವರ್ಯ ಲೇಔಟ್, ಮಾರುತಿ ಟೌನ್‌ಶಿಪ್, ನಗರಗಿರಿ ಟೌನ್‌ಶಿಪ್, ಕೆ.ನಾರಾಯಣಪುರ ಕ್ರಾಸ್, ಬಿ.ಡಿ.ಎಸ್. ಗಾರ್ಡನ್, ಕೊತನೂರು, ಪಟೇಲ್ ರಾಮಯ್ಯ ಲೇಔಟ್, ಅಂಜನಪ್ಪ ಲೇಔಟ್, ಸಿ.ಎಸ್.ಐ ಗೇಟ್, ಬೈರತಿ ಹಳ್ಳಿ, ಎವರ್ ಗ್ರೀನ್ ಲೇಔಟ್, ಕನಕ ಶ್ರೀ ಲೇಔಟ್, ಗೆದ್ದಲ ಹಳ್ಳಿ, ಹಿರೇಮಠ ಲೇಔಟ್, ಮೈಕಲ್ ಸ್ಕೂಲ್,ಅನುಗ್ರಹ ಲೇಔಟ್, ಕಾವೇರಿ ಲೇಔಟ್, ಆತ್ಮ ವಿದ್ಯಾನಗರ, ಬೈರತಿ ಹಳ್ಳಿ,ಲಕ್ಕಮ್ಮ ಲೇಔಟ್, ಪ್ರಕಾಶ್ ಗಾರ್ಡನ್, ಕ್ರಿಸ್ಟೀನ್ ಕಾಲೇಜು ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ.

ಸಿಂಗಾಪುರದಲ್ಲಿ ನಡೆಯುತ್ತಿರುವ ವಿಶ್ವ ಕನ್ನಡ ಹಬ್ಬದಲ್ಲಿ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅವರಿಗೆ ಇಸ್ರೋ ದ ಮಾಜಿ ಅಧ್ಯಕ್ಷ ಡಾ.ಕಿರಣ್ ಕುಮಾರ್ ಗೌರವಿಸಿದರು. ಈ ವೇಳೆ ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಇದ್ದರು.

ಸಂಪನ್ನಗೊಂಡ ಕನ್ನಡ ರಾಜ್ಯೋತ್ಸವ

ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದಲ್ಲಿ ನಡೆದ ಕಾರ್ಯಕ್ರಮ

ಬೆಂಗಳೂರು: ಶ್ರೀ ಶಿವಕುಮಾರ ಸ್ವಾಮಿ ಪ್ರತಿ ದಿನ ಬೆಳಗ್ಗೆ ನಾಲ್ಕು ಗಂಟೆಗೆ ಎದ್ದು 6 ಘಂಟೆಗೆ ಪ್ರತಿ ದಿನ ತಪ್ಪದೇ ಎಸ್ ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಪಾಠ ಮಾಡುವುದಲ್ಲದೇ, ಆಶ್ರಮಕ್ಕೆ ಬರುವ ಪ್ರತಿಯೊಂದು ಪತ್ರಗಳಿಗೂ ಸ್ಪಂದಿಸುತ್ತಿದ್ದರು ಎಂದು ತುಮಕೂರು ಸಂಸ್ಕೃತ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ಆರ್ ಶ್ರೀಧರ್ ಶಾಸ್ತ್ರೀ ತಿಳಿಸಿದ್ದಾರೆ.

ಆನಂದರಾವ್ ವೃತ್ತದ ಬಳಿಯ ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದಲ್ಲಿ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಆಶ್ರಮ ನಡೆಸುವ ಸಲುವಾಗಿ ಶಿಷ್ಯ ಸಮುದಾಯ, ನಗರದಲ್ಲಿ ಸಂಚರಿಸಿ ವಿದ್ಯಾ ಪೋಷಣೆ ಮಾಡುತ್ತಿರುವ ರೀತಿಯ ಬಗ್ಗೆ ಹಾಗೂ ಶ್ರೀ ಶಿವಕುಮಾರ ಸ್ವಾಮಿಗಳ ಮೇರು ವ್ಯಕ್ತಿತ್ವದ ಕುರಿತು ಮಹತ್ವದ ಸಂಗತಿ ತಿಳಿಸಿದರು.

ಬೆಂಗಳೂರು ಆಕಾಶವಾಣಿಯ ನಿವೃತ್ತ ನಿರ್ದೇಶಕ, ಡಾ. ಬಸವರಾಜ ಸಾದರ ಮಾತನಾಡಿ, ಕವಿರಾಜ ಮಾರ್ಗದಲ್ಲಿ ಕನ್ನಡ ಸಂಸ್ಕೃತಿಯ ಮಹತ್ವ ಹೇಗೆ ಪ್ರಸ್ತುತಗೊಂಡಿತ್ತು ಎಂಬುದನ್ನು ವಿವರಿಸಿದರು. ಯಾವುದು ಕನ್ನಡ ಸಂಸ್ಕೃತಿ, ಯಾವುದು ವಿಕೃತಿ ಎಂಬ ಬಗ್ಗೆ ವಿಚಾರ ಪೂರ್ಣ ವಿಷಯಗಳನ್ನು ಮಂಡಿಸಿ ಕನ್ನಡ ನಾಡು ನುಡಿ ಕಟ್ಟಲು ಶ್ರಮಿಸಬೇಕಾದ ಅಗತ್ಯವನ್ನು ತಿಳಿಸಿದರು.

ಆನಂದರಾವ್ ವೃತ್ತದ ಬಳಿಯ ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘದಲ್ಲಿ, ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತುಮಕೂರು ಸಂಸ್ಕೃತ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ಆರ್ ಶ್ರೀಧರ್ ಶಾಸ್ತ್ರೀ. ನಿವೃತ್ತ ಮುಖ್ಯ ಎಂಜಿನಿಯರ್ ನಂಜುಂಡಸ್ವಾಮಿ, ಕವಿಗಳಾದ ಕಾಶೀನಾಥ್ ಹಂದ್ರಾಳ, ಕೊಪ್ಪರಂ ಅನ್ನಪೂರ್ಣ, ಹೇಮಂತ, ಇತರರು ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿಯಲ್ಲಿ ಡಿಜಿಟಲ್ ಪೇಮೆಂಟ್ ವ್ಯವಸ್ಥೆ

ಪ್ರಯಾಣಿಕರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆಯಬಹುದು

ಬೆಂಗಳೂರು: ಸರಕಾರಿ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಪ್ರಯಾಣಿಕರ ಅನುಕೂಲಕ್ಕಾಗಿ ಆಯ್ದ ಬಸ್‌ಗಳಲ್ಲಿ ಡಿಜಿಟಲ್ ಪೇಮೆಂಟ್‌ನ್ನು ಆರಂಭಿಸಿದೆ.

ಡಿಜಿಟಲ್ ಪೇಮೆಂಟ್ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತಿದ್ದು, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಚಿಲ್ಲರೆ ಸಮಸ್ಯೆಯನ್ನು ನಿವಾರಿಸಲು ಮುಂದಾಗಿದ್ದು, ಬಿಎಂಟಿಸಿ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಳಿಕ ಕೆಎಸ್‌ಆರ್‌ಟಿಸಿ ತನ್ನ ಆಯ್ದ ಬಸ್‌ಗಳಲ್ಲಿ ಟಿಕೆಟ್ ಪಡೆಯಲು ಡಿಜಿಟಲ್ ಪೇಮೆಂಟ್ ವ್ಯವಸ್ಥೆ ಜಾರಿಗೆ ತಂದಿದೆ. ಸದ್ಯ ಕೆಲವು ಬಸ್‌ಗಳಲ್ಲಿ ಮಾತ್ರ ಈ ಸೌಲಭ್ಯ ಲಭ್ಯವಿದ್ದು, ಹಂತ ಹಂತವಾಗಿ ಎಲ್ಲಾ ಮಾದರಿ ಬಸ್‌ಗಳಲ್ಲಿ ಈ ಸೌಲಭ್ಯ ಜಾರಿಗೊಳಿಸಲು ಕೆಎಸ್‌ಆರ್‌ಟಿಸಿ ಮುಂದಾಗಿದೆ.

ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಸಂಚಾರ ನಡೆಸುವಾಗ ಜೇಬಿನಲ್ಲಿ ಹಣವಿಲ್ಲದಿದ್ದರೂ ಇನ್ನು ಮುಂದೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಟಿಕೆಟ್ ಪಡೆಯಬಹುದು. ಇದರಿಂದಾಗಿ ಜನರು ಹಣ ತರುವುದು ಮರೆತರೂ ಟಿಕೆಟ್ ಪಡೆಯಲು ಅನುಕೂಲವಾಗಲಿದೆ. ಅಲ್ಲದೇ ಚಿಲ್ಲರೆ ವಿಚಾರಕ್ಕೆ ಬಸ್‌ಗಳಲ್ಲಿ ನಡೆಯುವ ವಾಗ್ವಾದಗಳು ಕಡಿಮೆಯಾಗಲಿದೆ. ಪ್ರಯಾಣಿಕರು ನಿರ್ವಾಹಕರಿಂದ ಡೈನಮಿಕ್ ಕ್ಯೂಆರ್ ಕೋಡ್ ಮೂಲಕ ಟಿಕೆಟ್ ಪಡೆಯಬಹುದಾಗಿದ್ದು, ಫೋನ್ ಪೇ, ಗೂಗಲ್ ಪೇ, ಭೀಮ್, ಯುಪಿಐ ನಾಲ್ಕು ವ್ಯವಸ್ಥೆಗಳ ಮೂಲಕ ಡಿಜಿಟಲ್ ಪೇಮೆಂಟ್ ಮಾಡಬಹುದಾಗಿದೆ.

ಈ ಸೌಲಭ್ಯದ ಬಳಕೆಗಾಗಿಯೇ ಕೆಎಸ್‌ಆರ್‌ಟಿಸಿ ನಿರ್ವಾಹಕರಿಗೆ ಎಲೆಕ್ಟ್ರಿಕ್ ಟಿಕೆಟ್ ಮಷಿನ್‌ಗಳನ್ನು ನೀಡಿದೆ. ಎಲ್ಲಿಂದ, ಎಲ್ಲಿಗೆ ಪ್ರಯಾಣ ಎಂದು ವಿವರ ನೋಂದಾಯಿಸಿದ ಬಳಿಕ ಪ್ರಯಾಣಿಕರು ವಯಸ್ಕರು, ಮಕ್ಕಳು ಎಂಬ ಆಯ್ಕೆ ಬರುತ್ತದೆ. ನಿರ್ವಾಹಕರು ವಿವರ ಭರ್ತಿ ಮಾಡಿದ ಬಳಿಕ ಟಿಕೆಟ್‌ನ ಮೊತ್ತ, ಟಿಕೆಟ್‌ಗೆ ಹಣ ನೀಡುವ ಆಯ್ಕೆಯನ್ನು ಕೇಳುತ್ತದೆ. ಇಲ್ಲಿ ಕ್ಯಾಷ್, ಡಿಜಿಟಲ್ ಪೇಮೆಂಟ್ ಸೌಲಭ್ಯ ನೀಡಲಾಗಿದೆ. ಪ್ರಯಾಣಿಕರ ಆಯ್ಕೆಯಂತೆ ಡಿಜಿಟಲ್ ಪೇಮೆಂಟ್ ಮಾಡುವುದಾದರೆ ನಿರ್ವಾಹಕರು ಕ್ಯೂಆರ್ ಕೋಡ್ ತೆರೆಯುತ್ತಾರೆ. ಕೈಯಲ್ಲಿರುವ ಮೊಬೈಲ್ ಮೂಲಕ ನೀವು ಹಣ ಪಾವತಿ ಮಾಡಿ ಟಿಕೆಟ್ ಪಡೆಯಬಹುದು.

ಆಯ್ದ ಕೆಲವು ಮಾರ್ಗಗಳಲ್ಲಿ ವ್ಯವಸ್ಥೆ ಜಾರಿ

ಕೆಎಸ್‌ಆರ್‌ಟಿಸಿಯಲ್ಲಿ 17 ವಿಭಾಗಗಳು, 83 ಘಟಕಗಳು, 8,360 ಬಸ್‌ಗಳಿದ್ದು, ಸುಮಾರು 10,000 ಡಿಜಿಟಲ್ ಪೇಮೆಂಟ್ ಎನಬಲ್ ಮೆಷಿನ್‌ಗಳು ಬೇಕು ಎಂದು ಅಂದಾಜಿಸಲಾಗಿದೆ. ಆದ್ದರಿಂದ ಆಯ್ದ ಕೆಲವು ಮಾರ್ಗದಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಹಂತ ಹಂತವಾಗಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ.

ನ.15ರಿಂದ ಮಲ್ಲೇಶ್ವರ ಕಡಲೆಕಾಯಿ ಪರಿಷೆ

ಬೆಂಗಳೂರು: ಭ್ರಮರಾಂಭ ಸಮೇತ ಶ್ರೀ ಕಾಡುಮಲ್ಲೇಶ್ವರ ದೇವಾಲಯ ಮತ್ತು ಕಾಡುಮಲ್ಲೇಶ್ವರ ಗೆಳೆಯರ ಬಳಗದ ಜಂಟಿ ಸಹಯೋಗದಲ್ಲಿ ನ.15ರಿಂದ 18ರವರೆಗೆ ಮಲ್ಲೇಶ್ವರ ಕಡಲೆಕಾಯಿ ಪರಿಷೆ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ, ಇದೇ ವೇಳೆ ಕನ್ನಡ ನಾಡಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಸಂವರ್ಧನೆಗಾಗಿ 2010ರಲ್ಲಿ ಆರಂಭಿಸಿದ ಹುಣ್ಣಿಮೆ ಹಾಡು ಕಾರ್ಯಕ್ರಮದ 200ನೇ ಸಂಚಿಕೆ ಆಚರಿಸಲಾಗುವುದು. ಕಳೆದ 8ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಕಡಲೆಕಾಯಿ ಪರಿಷೆ ಬಸವನಗುಡಿ ಕಡಲೆಕಾಯಿ ಪರಿಷಯಂತೆ ಪ್ರಸಿದ್ಧಿ ಪಡೆದಿದೆ. ನಾಲ್ಕು ದಿನಗಳ ಕಡಲೆಕಾಯಿ ಪರಿಷೆಯಲ್ಲಿ ಕರ್ನಾಟಕ, ತಮಿಳುನಾಡು, ಆಂಧ್ರ, ತೆಲಂಗಾಣದಿಂದ ರೈತರು ಕಡಲೆಕಾಯಿ ತಂದು ರೈತರು ಮಾರಾಟ ಮಾಡಲಿದ್ದಾರೆ. ಬೀದಿ ಬದಿಯ ವ್ಯಾಪಾರಿಗಳಿಗೆ 400ಕ್ಕೂ ಹೆಚ್ಚು ಮಳಿಗೆಗಳಿಗೆ ಅವಕಾಶ ನೀಡಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ ಕಡಲೆಕಾಯಿ ಪರಿಷೆಯ ಪೋಸ್ಟರ್ ಬಿಡುಗಡೆ ಮಾಡಿದರು.

ಪರಿಸರ ಸ್ನೇಹಿ ಪರಿಷೆಗೆ ಆದ್ಯತೆ ನೀಡುವ ಉದ್ದೇಶದಿಂದ ಪ್ಲಾಸ್ಟಿಕ್ ಮುಕ್ತ ಬಟ್ಟೆ ಚೀಲ, ಪೇಪರ್ ಕವರ್ ಬಳಸಲು ಸಾರ್ವಜನಿಕರಿಗೆ ಉಚಿತವಾಗಿ ವಿತರಿಸಲಾಗುತ್ತದೆ. ಕಡಲೆಕಾಯಿ ಪರಿಷೆಯಲ್ಲಿ ಎಂಟು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

{ ಪ್ರಲ್ಹಾದ್ ಜೋಶಿ } ಕೇಂದ್ರ ಸಚಿವ

ವಕ್ಫ್ ಆಸ್ತಿ ಯಾರೊಬ್ಬರ ಸ್ವತ್ತೂ ಆಗಬಾರದು. ವಕ್ಫ್ ಆಸ್ತಿ ರಕ್ಷಣೆ ಬಗ್ಗೆ ಮುಂದಿನ ಚುನಾವಣೆಯಲ್ಲೂ ಬಿಜೆಪಿ ಪ್ರಣಾಳಿಕೆಯಲ್ಲಿ ಸೇರಿಸುತ್ತದೆ.ಕಾಂಗ್ರೆಸ್ಸಿಗರು ಮೊದಲು ನಮ್ಮ ಪ್ರಣಾಳಿಕೆಯನ್ನು ಸರಿಯಾಗಿ ಓದಲಿ. ಬಿಜೆಪಿ ಪ್ರಣಾಳಿಕೆಯಲ್ಲಿ ವಕ್ಫ್‌ಗೆ ಇರೋ ಮೂಲ ಆಸ್ತಿ ಸಂರಕ್ಷಿಸುತ್ತೇವೆ ಎಂದಿದ್ದೇವೆ. ಆದರೆ, ಅತಿಕ್ರಮಣವನ್ನಲ್ಲ.

ಆರನೇಯ ಅನಂತಸ್ಮರಣೆ



ಉದಾತ್ತ ಸ್ವಭಾವ, ವೈವಿಧ್ಯ ಜಾಣ್ಮೆ, ಜನಮಾನಸದೊಂದಿಗೆ
ಸೌಹಾರ್ದ ಸಂಬಂಧ, ಸ್ಫುರದ್ರೂಪಿ ವ್ಯಕ್ತಿತ್ವದ
ದಿ. ಅನಂತಕುಮಾರ
ಭಾರತದ ಶುದ್ಧ ರಾಜಕಾರಣದಲ್ಲಿ ನಿಮ್ಮ ಹೆಸರು ಅಜರಾಮರ
ನಿಮಗೆ ಹೃದಯಾಂತರಾಳದ ನಮನಗಳು
ಶ್ರೀಮತಿ ತೇಜಸ್ವಿನಿ ಅನಂತಕುಮಾರ
ಅಧ್ಯಕ್ಷರು : ಅದಮ್ಯ ಚೇತನ ಫೌಂಡೇಶನ್
ಶ್ರೀಮತಿ ಐಶ್ವರ್ಯಾ ಅನಂತಕುಮಾರ
ಕುಮಾರಿ ವಿಜೇತಾ ಅನಂತಕುಮಾರ
ನಂದಕುಮಾರ
ವಿಭವ ಸಮೂಹ ಸಂಸ್ಥೆಗಳು
ಅನಂತಕುಮಾರ ಪ್ರತಿಷ್ಠಾನ ಬೆಂಗಳೂರು

ಸಮಾಚಾರ ಸಣ್ಣದಲ್ಲ

ಗುಂಡು ತಗುಲಿ ಯುವಕ ಸಾವು

ಬೆಳಗಾವಿ: ಖಾನಾಪುರ ಅರಣ್ಯ ಪ್ರದೇಶದಲ್ಲಿ ನವಿಲುಗಳನ್ನು ಬೇಟೆ ಯಾಡುವ ಸಂದರ್ಭದಲ್ಲಿ ಯುವಕನೋರ್ವನಿಗೆ ಗುಂಡು ತಗುಲಿ ಸಾವಣಪ್ಪಿ ರುವ ಘಟನೆ ಪೊಲೀಸ್ ಮೂಲಗಳಿಗೆ ಸ್ಪಷ್ಟಗೊಂಡಿದೆ. ಭಾನುವಾರ ತಡರಾತ್ರಿ, ಖಾನಾಪುರ ತಾಲೂಕಿನ ಹಲಸಿ – ಬೇಕವಾಡ ರಸ್ತೆಯ ನರಸೇವಾಡಿ ಬ್ರಿಡ್ಜ್ ಬಳಿ ಅಲ್ತಾಫ ಗೌಸ್ ಮಕಾಂದರ್ (27) ಎಂಬಾತ ಗುಂಡು ತಗುಲಿ ಸಾವಣಪ್ಪಿದ್ದ. ಮೇಲ್ನೋಟಕ್ಕೆ ಇದು ಗುಂಡಿನ ಚಕಮಕಿ ಎಂದೇ ಭಾವಿಸಲಾಗಿತ್ತಾದರು ಪೊಲೀಸ್ ತನಿಖೆಯಿಂದ ಪ್ರಕರಣ ಇನ್ನೊಂದು ಆಯಾಮ ಬೆಳಕಿಗೆ ಬಂದಿದೆ. ನವಿಲು ಬೇಟೆಯಾಡುವ ಸಂದರ್ಭದಲ್ಲಿ ಗುಂಡು ತಗುಲಿ ಯುವಕ ಸಾವನಪ್ಪಿದ್ದು ಘಟನಾ ಸ್ಥಳದಲ್ಲಿ ನವಿಲಿನ ಮಾಂಸ ಪತ್ತೆಯಾಗಿದ್ದು ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಹಾಗೂ ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೇದ್ ಮಾಹಿತಿ ನೀಡಿದ್ದಾರೆ.

ತನ್ನೆಲ್ಲ ಪ್ರವಾಸಗಳಿಗೆ 9% ರಿಯಾಯತಿ ಘೋಷಣೆ | ಈ ಕೊಡುಗೆ ಸೀಮಿತ ಅವಧಿಗೆ ಮೀಸಲು

ಅಡಿಗಾಸ್ ಸಂಸ್ಥೆಯ ಭರ್ಜರಿ ಕೊಡುಗೆ

ಬೆಂಗಳೂರು: ಪ್ರವಾಸೋದ್ಯಮ ಕ್ಷೇತ್ರದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿರುವ ಅಡಿಗಾಸ್ ಸಂಸ್ಥೆ 3 ದಶಕಗಳನ್ನು ಯಶಸ್ವಿಯಾಗಿ ಪೂರೈಸಿದೆ. ಇದರ ಪ್ರಯುಕ್ತ ಹಾಗೂ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ತನ್ನೆಲ್ಲ ಪ್ರವಾಸಗಳಿಗೆ 9% ರಿಯಾಯತಿಯನ್ನು ಘೋಷಿಸಿದೆ. ಸಂಸ್ಥೆಯ ಮಾಲೀಕರಾದ ಶ್ರೀ ಕೆ.ನಾಗರಾಜ ಅಡಿಗರು ಮಾತನಾಡಿ , ಈ ಕೊಡುಗೆ ಸೀಮಿತ ಅವಧಿಗೆ ಮೀಸಲಾಗಿದ್ದು ಸಂಸ್ಥೆಯ ಯಾವುದೇ ಪ್ರವಾಸಕ್ಕೆ ಮುಂಗಡ ಬುಕಿಂಗ್ ಮಾಡಿದವರಿಗೆ ಈ ಕೊಡುಗೆ ಅನ್ವಯಿಸಲಿದೆ.

ನಿಖರ ಮಾಹಿತಿ, ನಿಗದಿತ ಸೌಲಭ್ಯ: ನೂತನ ಪ್ರಯೋಗಗಳಿಗೆ ಸದಾ ಮುಕ್ತವಾಗಿರುವ ಅಡಿಗಾಸ್ ಹೊಸ ಹೊಸ ಪ್ರವಾಸಿ ಯೋಜನೆಗಳನ್ನು ಪ್ರವಾಸಿಗರಿಗೆ ಪರಿಚಯಿಸುತ್ತಲೇ ಬಂದಿದೆ. ಅಂತೆಯೇ ಈ ಬಾರಿ Domestic Fixed Departures ಎನ್ನುವ ಯೋಜನೆಯಡಿ ಭಾರತದಾದ್ಯಂತ ಪ್ರಸಿದ್ಧ ಪ್ರವಾಸಿ ತಾಣಗಳಿಗೆ ಪ್ರತಿಷ್ಠಿತ ಪಂಚತಾರ ಹೋಟೆಲ್ ಹಾಗೂ ರೆಸಾರ್ಟ್ ಗಳಲ್ಲಿ ವಸತಿ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ, ನಿಖರ ಮಾಹಿತಿಯನ್ನೊಳಗೊಂಡ ಕಾರ್ಯಕ್ರಮ ಪಟ್ಟಿ, ಮುಂಚಿತವಾಗಿ ಕಾಯ್ದಿರಿಸಿದ ಸುಸಜ್ಜಿತ ಹೋಟೆಲ್ ಗಳಲ್ಲಿ ಉಟೋಪಹಾರ, ಸ್ಥಳೀಯ ಗೈಡ್ ಗಳ ಸೌಲಭ್ಯ ವಿದ್ದು, ನಿಮ್ಮ ಪ್ರವಾಸವು ಸುಖಕರವಾಗಿರುತ್ತದೆ.

ಮಿತವ್ಯಯದ ಸಮೂಹ ಪ್ರವಾಸ: ಇನ್ನುಳಿದಂತೆ ದೇಶಿಯ ಪ್ರವಾಸಗಳ ಬೇಡಿಕೆ ದುಪ್ಪಟ್ಟಾಗಿದೆ. ಭಾರತದಾದ್ಯಂತ ನಮ್ಮ ದಕ್ಷಿಣ ಭಾರತೀಯ ಉಟೋಪಹಾರ, ಹವಾ ನಿಯಂತ್ರಿತ ವಾಹನಗಳಲ್ಲಿ ಪ್ರಯಾಣ, ಅತ್ಯುತ್ತಮ ಹೋಟೆಲ್‌ಗಳ ವಾಸ್ತವ್ಯ, ಅನುಭವಿ ಟೂರ್ ಮ್ಯಾನೇಜರ್ ಗಳ ಸೇವೆ ಇವೆಲ್ಲ ಸೇರಿ ಪ್ರವಾಸವನ್ನು ಅವಿಸ್ಮರಣೀಯ ವನ್ನಾಗಿಸುತ್ತದೆ. ಇದಲ್ಲದೆ ಗ್ರಾಹಕರಿಗೆ ಅನುಕೂಲಿತ ಮತ್ತು ಮಧುಚಂದ್ರ ಪ್ರವಾಸಗಳು ಪ್ರವಾಸಿಗರ ಆಯ್ಕೆಯಾದ ದಿನಾಂಕಕ್ಕೆ ಅವರ ಆದಾಯಕ್ಕ ಅನುಗುಣವಾಗಿ ಪಂಚಾತಾರಾ ಸೌಲಭ್ಯಗಳೊಂದಿಗೆ, ವ್ಯವಸ್ಥೆ ಮಾಡುವ ಸಾಮರ್ಥ್ಯ ಅಡಿಗಾಸ್ ಸಂಸ್ಥೆ ಹೊಂದಿದೆ. ನಿಮ್ಮ ಆಯ್ಕೆಯ ದೇಶಿಯ ಅಥವಾ ವಿದೇಶಿ ಪ್ರವಾಸಿ ತಾಣಕ್ಕೆ, ನೀವು ಇಚ್ಛಿಸಿದ ದಿನಾಂಕದಲ್ಲಿ, ನಿಮ್ಮ ಆದಾಯಕ್ಕನು ಗುಣವಾಗಿ ಯೋಜಿಸುವ ಪ್ರವಾಸವೇ Customised ಟೂರ್ಸ್. 500ಕ್ಕೂ ಹೆಚ್ಚಿನ ಪ್ರವಾಸಗಳು ಈ ಪ್ರಕಾರ ದಲ್ಲಿ ಲಭ್ಯವಿದೆ.

ಅಂತಾರಾಷ್ಟ್ರೀಯ ಪ್ರವಾಸ

ಅಂತೆಯೇ ಅಂತಾರಾಷ್ಟ್ರೀಯ ಪ್ರವಾಸಗಳಾದ ಯುರೋಪ್, ಯುಕೆ, ಆಸ್ಟ್ರೇಲಿಯಾ, ದುಬೈ, ಸಿಂಗಾಪುರ, ಮಲೇಷಿಯಾ, ಥೈಲ್ಯಾಂಡ್, ಶ್ರೀಲಂಕಾ, ನೇಪಾಳ ಮತ್ತು ಭೂತನ್ ಪ್ರವಾಸಗಳಿಗೆ ಬೇಡಿಕೆ ಹೆಚ್ಚಾಗಿದೆ. ವಿದೇಶಿ ಪ್ರವಾಸಗಳಿಗೆ ಅಡಿಗಾಸ್ ಸಂಸ್ಥೆ ಪ್ರಥಮ ಆದ್ಯತೆ ಯಾಗಿದೆ. ಏಕೆಂದರೆ ಅಡಿಗಾಸ್ ನಲ್ಲಿ ಸಹ ಪ್ರಯಾಣಿಕರೆಲ್ಲ ಕರ್ನಾಟಕದ ವಿವಿಧ ಭಾಗಗಳಿಂದ ಬಂದವರಾಗಿದ್ದರಿಂದ ಭಾಷೆ, ಸಂಸ್ಕೃತಿ, ಆಚಾರ ವಿಚಾರ, ಉಟೋಪಹಾರ ಎಲ್ಲದರಲ್ಲೂ ಸಾಮ್ಯತೆಯಿದ್ದು ಹೊಂದಾಣಿಕೆ ಸುಲಭ. ಸಮಾನ ಮನಸ್ಸಿನ ಕನ್ನಡಿಗರಿಂದ,ಕನ್ನಡಿಗರಿಗಾಗಿ ಕನ್ನಡಿಗರೇ ಇರುವ ಪ್ರವಾಸ home Sickness ಗೆ ಅವಕಾಶವನ್ನೇ ಕೊಡುವುದಿಲ್ಲ. ಅಂತರ ರಾಷ್ಟ್ರೀಯ ಸ್ತರದ ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ವಸತಿ, ಭಾರತೀಯ ಶೈಲಿಯ ಉಟೋಪಹಾರ, ಇಂಗ್ಲಿಷ್ ಮಾತನಾಡಬಲ್ಲ, ಪ್ರವಾಸಿ ತಾಣಗಳ ಕುರಿತು ಅಪರಿಮಿತ ಜ್ಞಾನವನ್ನು ಹೊಂದಿದ ಟೂರ್ ಮ್ಯಾನೇಜರ್, ಸುಸಜ್ಜಿತ, ಐಷಾರಾಮಿ ವಾಹನಗಳಲ್ಲಿ ಪ್ರಯಾಣ, ವಿಶ್ವ ವಿಖ್ಯಾತ ತಾಣಗಳ, ಜನಪ್ರಿಯ ಪ್ರವಾಸಿ ತಾಣಗಳ ಪ್ರವೇಶ ಶುಲ್ಕ, ಖಡ್ಡಾಯ ವಾಗಿ ಪಾವತಿಸಲೇ ಬೇಕಾದ ಡ್ರೈವರ್ ಟಿಪ್ಸ್, ಗೈಡ್ ಚಾರ್ಜಸ್, ವಿಮೆ ಇವುಗಳನ್ನೆಲ್ಲ ಒಳಗೊಂಡ ಒಂದು ಸಮಗ್ರ ಯೋಜಿತ ಪ್ರವಾಸ ನಿಮ್ಮ ಮನಸ್ಸಿಗೆ ಮೂಡ ನೀಡುತ್ತದೆ.

Adigas yatra®
Recognised by Ministry of Tourism, Govt. of India

ಸಂಪರ್ಕಿಸಬೇಕಾದ ವಿಳಾಸ
NO.144, 3 rd Floor, Durga Mansion, DVG Road, Basavanagudi, Bangalore-560004 Tel/Fax: 080- 26616678, 41205813, E-mail: adigasyatragmail.com

ಬಸವನಗುಡಿ	080-2661 6678 7022259008 ,
ವಿಜಯನಗರ	080-23356678 9845631379
ರಾಜರಾಜೇಶ್ವರಿ ನಗರ	080- 26696678 7483366378
ಮಲ್ಲೇಶ್ವರಂ	080-23346678 7022259003
ಹುಬ್ಬಳ್ಳಿ	0836-2256678 9448083008
ಹಾಸನ	08172-261888 8884679122

ಕಛೇರಿಯ ಸಮಯ
10.00 am to 7.00 pm.
ಹೆಚ್ಚಿನ ಮಾಹಿತಿಗಾಗಿ
Our website: www.adigasyatra.com
Email: careadigasyatra.com

ಪುರಸಭಾ ಕಾರ್ಯಾಲಯ, ಶ್ರೀರಂಗಪಟ್ಟಣ–571438

ಕಛೇರಿ ದೂರವಾಣಿ–08236–252229/253030
Website: www.srirangapatnatown.mrc.gov.in
Email: itstafff_ulb_srirangapatana.yahoo.co.in

ಸಂ: ಪುಕಾಶ್ರೀ/ತಾಂ.ಶಾ/ಟೆಂ:07/2024–25 ದಿನಾಂಕ: 08.11.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಶ್ರೀರಂಗಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ 15ನೇ ಹಣಕಾಸು ಮತ್ತು ಎಸ್.ಎಫ್.ಸಿ, ಎಸ್.ಬಿ.ಎಂ–1.00 ಹೆಚ್ಚುವರಿ ಅನುದಾನ ಮತ್ತು ಎಸ್.ಬಿ.ಎಂ–(2) ಹಾಗೂ ಪುರಸಭಾ ಅನುದಾನಗಳಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000ರಂತೆ ಹಾಗೂ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ಗಳ ಸೂಚನೆಗಳು ಹಾಗೂ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರುಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಕಾಮಗಾರಿಗಳ ನಿರ್ವಹಣೆ ಅವಧಿ 120 ದಿನಗಳು. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ್ನು ಸಲ್ಲಿಸಲು ದಿನಾಂಕ: 26.11.2024ರ ಸಂಜೆ 5.30 ಗಂಟೆಯವರೆಗೆ ನಿಗದಿಪಡಿಸಲಾಗಿದೆ. ಹಾಗೂ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: 28.11.2024ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು http://www.kppp.karnataka.gov.in ಹಾಗೂ ಪುರಸಭಾ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರ ಸಂ	ಕಾಮಗಾರಿಗಳ ಇಂಡೆಂಟ್ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಟೆಂಡರ್ ಮೀಸಲಾತಿ
1	DMA/2024-25/OW/WORK_INDENT20572/CALL-2	46.91	46910.00	ಪರಿಶಿಷ್ಠ ಜಾತಿ
2	DMA/2024-25/RD/WORK_INDENT20564/CALL-2	39.94	79880.00	ಸಾಮಾನ್ಯ
3	DMA/2024-25/OW/WORK_INDENT 31789	12.81	16020.00	ಪರಿಶಿಷ್ಠ ಪಂಗಡ
4	DMA/2024-25/OW/WORK_INDENT31790	13.63	17040.00	ಪರಿಶಿಷ್ಠ ಜಾತಿ
5	DMA/2024-25/WS/WORK_INDENT31792	18.38	45950.00	ಸಾಮಾನ್ಯ
6	DMA/2024-25/RD/WORK_INDENT 31796	35.15	70300.00	ಸಾಮಾನ್ಯ
7	DMA/2024-25/RD/WORK_INDENT 31798	4.13	10330.00	ಸಾಮಾನ್ಯ
8	DMA/2024-25/RD/WORK_INDENT 31799	2.24	2800.00	ಪರಿಶಿಷ್ಠ ಜಾತಿ
9	DMA/2024-25/OW/WORK_INDENT 31981	0.87	2180.00	ಸಾಮಾನ್ಯ

ಸೂಚನೆ: ಕಾರಣಾಂತರಗಳಿಂದ ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.

ಸಹಿ/–ಮುಖ್ಯಾಧಿಕಾರಿ, ಪುರಸಭೆ, ಶ್ರೀರಂಗಪಟ್ಟಣ ಸಹಿ/–ಆಡಳಿತಾಧಿಕಾರಿ, ಪುರಸಭೆ, ಶ್ರೀರಂಗಪಟ್ಟಣ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/430/2024–25

ಮೈಸೂರು ಮಹಾನಗರ ಪಾಲಿಕೆ, ಮೈಸೂರು

